ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

*Centre of Excellence for Farmer Producer Organizations*

ತ್ರೈಮಾಸಿಕ ಇ-ಸುದ್ದಿ ಪತ್ರಿಕೆ

ಸಂಚಿಕೆ 2 • ಜುಲೈ 2025 www.coefpo.org

# ಕರುನಾಡ ಎಫ್.ಪಿ.ಒ ಸಮಾಚಾರ





## ಸಲಹಾ ಸಮಿತಿ

**ಶ್ರೀಮತಿ ಉಮಾ ಮಹಾದೇವನ್, ಭಾ.ಆ.ಸೇ**
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು

**ಡಾ. ರವಿಶಂಕರ್ ಜೆ. ಭಾ.ಆ.ಸೇ**
ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ

**ಡಾ. ಶಮ್ಲಾ ಇಕ್ಬಾಲ್, ಭಾ.ಆ.ಸೇ**
ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಡಾ. ವಿಷ್ಣುವರ್ಧನ**
ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

**ಶ್ರೀ ಡಿ.ಎಸ್. ರಮೇಶ್, ಭಾ.ಆ.ಸೇ**
ನಿರ್ದೇಶಕರು, ತೋಟಗಾರಿಕೆ ಇಲಾಖೆ

**ಶ್ರೀ ವೈ. ಎಸ್. ಪಾಟೀಲ, ಭಾ.ಆ.ಸೇ**
ಆಯುಕ್ತರು, ಕೃಷಿ ಇಲಾಖೆ

**ಮಹೇಶ್ ಬಿ. ಶಿರೂರು, ಭಾ.ಅ.ಸೇ**
ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ

**ಶ್ರೀ ಜಿ. ಟಿ. ಪುತ್ರ**
ನಿರ್ದೇಶಕರು, ಕೃಷಿ ಇಲಾಖೆ

**ಶ್ರೀ ಪರ್ವೇಜ್ ಬಂಥನಾಳ**
ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ

## ನಿರ್ದೇಶಕರ ನುಡಿ...



ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು ಇದು ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರ ಸಹಯೋಗದಲ್ಲಿ 2017 ರಲ್ಲಿ ಸ್ಥಾಪನೆಗೊಂಡ ಒಂದು ವಿಶಿಷ್ಟ ಸಂಸ್ಥೆ. ಈ ಸಂಸ್ಥೆಯ ಮೂಲ ಧ್ಯೇಯಗಳೆಂದರೆ ರೈತ ಉತ್ಪಾದಕರ ಸಂಸ್ಥೆಗಳನ್ನು ರೂಪಿಸಲು ಪ್ರಾರಂಭಿಕ ಹಂತದಲ್ಲಿ ಸಂಘಟನೆ, ಅವಕಾಶಗಳು, ಉಪಯೋಗಗಳು, ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಯ ವಿವಿಧ ಹಂತಗಳ ಕುರಿತು ಸಲಹೆ ಮತ್ತು ಮಾರ್ಗದರ್ಶನ ನೀಡುವುದು ಉದ್ದೇಶವಾಗಿರುತ್ತದೆ. ಇದಲ್ಲದೇ ರೈತ ಉತ್ಪಾದಕರ ಸಂಸ್ಥೆಗಳ ಪ್ರಗತಿಗೆ ಅವಶ್ಯಕವಾಗಿರುವ ತರಬೇತಿ, ತಾಂತ್ರಿಕ ಮಾಹಿತಿ, ಕಾನೂನು ಪಾಲನೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರ ಜವಾಬ್ದಾರಿಗಳು, ವೃತ್ತಿಪರತೆ ಹಾಗೂ ಸಾಮರ್ಥ್ಯ ಬಲವರ್ಧನೆ ಮಾಡುವುದು ಮತ್ತು ತಾಂತ್ರಿಕ ತರಬೇತಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ನೀಡುವುದು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಮೇಲ್ಕಂಡ ಚಟುವಟಿಕೆಗಳ ಜೊತೆಗೆ, ಉತ್ಪಾದಕ ಸಂಸ್ಥೆಗಳನ್ನು ಒಂದು ಉತ್ತಮ ವ್ಯವಹಾರಿಕ ಸಂಸ್ಥೆಗಳಾಗಿ ಬೆಳೆಸಲು ಉತ್ಪಾದನೆ, ಕೊಯ್ಲೋತ್ತರ ಚಟುವಟಿಕೆ, ಖರೀದಿ, ಶ್ರೇಣೀಕರಣ, ಸಂಸ್ಕರಣೆ, ಕ್ರೋಢೀಕರಣ, ಮಾರಾಟ, ರಫ್ತು, ಆಮದು, ಇನ್ನಿತರೆ ಮೌಲ್ಯ ಸರಪಳಿಯ ವಿವಿಧ ಹಂತಗಳಲ್ಲಿ ವ್ಯಾಪಾರ ಹಾಗೂ ಲಾಭಾಂಶ ವೃದ್ಧಿ ಕುರಿತು ಜಾಗೃತಿ ಮೂಡಿಸುವುದು. ಕೃಷಿ ಪರಿಕರಗಳ ಮಾರಾಟ ಹಾಗೂ ಕೃಷಿ ಉತ್ಪನ್ನಗಳನ್ನು ಕ್ರೋಢೀಕರಿಸಿ ಒಟ್ಟಾಗಿ ಮಾರಾಟ ಮಾಡುವ, ಹಾಗೆಯೇ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡುವ ಕುರಿತು ರೈತಾಪಿ ವರ್ಗಕ್ಕೆ ತರಬೇತಿ ನೀಡುವುದು ಮತ್ತು ವಿವಿಧ ಇಲಾಖೆಗಳ ಅಡಿಯಲ್ಲಿ ಲಭ್ಯವಿರುವ ಯೋಜನೆಗಳ ಮಾಹಿತಿ ಹಾಗೂ ದೊರೆಯುವ ಅನುಕೂಲಗಳನ್ನು ತಿಳಿಸುವುದು, ಹೀಗೆ ಅನೇಕ ಕಾರ್ಯಗಳನ್ನು ಕೈಗೊಳ್ಳುತ್ತಾ ಸದಸ್ಯ ರೈತರ ಶ್ರೇಯೋಭಿವೃದ್ಧಿಗಾಗಿ ನಮ್ಮ ಸಂಸ್ಥೆಯು ಸತತವಾಗಿ ಶ್ರಮಿಸುತ್ತಿದೆ. ಕಳೆದ ತ್ರೈಮಾಸಿಕ ಚಟುವಟಿಕೆಗಳನ್ನು ಗಮನಿಸಿದರೆ ನಮ್ಮ ಸಂಸ್ಥೆಯು, ಮಹಿಳಾ ಕಿಸಾನ್ ರೈತ ಉತ್ಪಾದಕರ ಕಂಪನಿಗಳ (MKPC) ಸುಮಾರು 99 ನಿರ್ದೇಶಕರ ಮಂಡಳಿಯ ಸದಸ್ಯರಿಗೆ ಹಾಗೂ ಪದಾಧಿಕಾರಿಗಳಿಗೆ, ತಮಿಳುನಾಡು ನೀರಾವರಿ ಕೃಷಿ ಆಧುನೀಕರಣ ಯೋಜನೆ (TNIAMP) ಯ ಅಡಿ 74 ಸದಸ್ಯ ರೈತರಿಗೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳಿಗೆ, ತೋಟಗಾರಿಕೆ ಇಲಾಖೆ ಉತ್ತೇಜಿತ ರೈತ ಉತ್ಪಾದಕರ ಕಂಪನಿಗಳ 122 ನಿರ್ದೇಶಕರ ಮಂಡಳಿಯ ಸದಸ್ಯರು ಮತ್ತು ಸಿ.ಇ.ಓ ಗಳಿಗೆ, ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ ಪೂರ್ಣಗೊಳಿಸಿದೆ, ಹಾಗೆಯೆ ಸುಮಾರು 79 ರೈತ ಉತ್ಪಾದಕರ ಕಂಪನಿಗಳ 313 ಸದಸ್ಯರಿಗೆ ತರಬೇತಿಯನ್ನು ಕೊಡಲಾಗಿದೆ ಮತ್ತು ಈ ಕಾರ್ಯ ಸಾಗುತ್ತಲೇ ಇದೆ. ನಮ್ಮ ಸಂಸ್ಥೆಯು ಕಳೆದ ನಾಲ್ಕು ವರ್ಷಗಳಿಂದ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡದೇವನ ಕೋಟೆಯಲ್ಲಿ 4 ಬುಡಕಟ್ಟು ರೈತ ಉತ್ಪಾದಕರ

ಕಂಪನಿಗಳನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಿಂದ ಸ್ಥಾಪಿಸಿ ಕೈ ಹಿಡಿದು ಮುನ್ನಡೆಸುವ ಕೆಲಸಗಳನ್ನು ಮಾಡುತ್ತಿದೆ. ಬಸವನಗಿರಿ ಬುಡಕಟ್ಟು ರೈತ ಉತ್ಪಾದಕ ಕಂಪನಿಯಲ್ಲಿ ತೆಂಗಿನ ನಾರು ಅಭಿವೃದ್ಧಿ ನಿಗಮದ ಜೊತೆ ನಮ್ಮ ಸಂಸ್ಥೆಯು ಒಡಂಬಡಿಕೆ ಮಾಡಿಕೊಂಡು ನಾರಿನ ಉಪ-ಉತ್ಪನ್ನಗಳ ತಯಾರಿಕಾ ಘಟಕವನ್ನು ಸ್ಥಾಪಿಸಿದೆ. ಸದ್ಯದಲ್ಲಿ ಈ ಕಾರ್ಯವು ತರಬೇತಿ ಹಂತದಲ್ಲಿದ್ದು 4 ತಿಂಗಳವರೆಗೂ ತರಬೇತಿ ಕಾರ್ಯ ಮುಂದುವರೆಯುತ್ತದೆ. ಆದರೆ ತರಬೇತಿ ಪ್ರಾರಂಭವಾದ 1 ತಿಂಗಳಿನ್ನಲ್ಲೇ ಬಸವನಗಿರಿ ಎ ಮತ್ತು ಬಿ ಹಾಡಿ ಹಾಗೂ ಸೊಳ್ಳೆಪುರ ಸಿ ಹಾಡಿಯ 20 ಮಹಿಳಾ ಶಿಬಿರಾರ್ಥಿಗಳು ನಾರಿನ ಮ್ಯಾಟ್ ತಯಾರಿಕೆಯಲ್ಲಿ ನೈಪುಣ್ಯತೆ ಸಾಧಿಸಿದ್ದಾರೆ ಎಂದು ತಿಳಿಸಲು ಬಹಳ ಹೆಮ್ಮೆ ಎನಿಸುತ್ತಿದೆ. ಹಾಗೆಯೇ 4 ಬುಡಕಟ್ಟು ರೈತ ಉತ್ಪಾದಕರ ಕಂಪನಿಗಳ ಸದಸ್ಯ ರೈತರಿಗೆ ಐ.ಸಿ.ಎ.ಆರ್-ಭಾರತೀಯ ತೋಟಗಾರಿಕೆ ಸಂಶೋದನಾ ಸಂಸ್ಥೆ ಹೆಸರಘಟ್ಟ, ಬೆಂಗಳೂರು ಇವರ ಸಹಯೋಗದೊಂದಿಗೆ, ಬುಡಕಟ್ಟು ಉಪ ಯೋಜನೆ ಅಡಿಯಲ್ಲಿ ಸುಮಾರು 10.5 ಲಕ್ಷದ ಹಣ್ಣಿನ ಸಸಿಗಳು (ಮಾವು, ಹಲಸು, ಸೀಬೆ, ಸೀತಾಫಲ, ಹುಣಸೆ ಮತ್ತು ನಿಂಬೆ ಇತ್ಯಾದಿ) ಮತ್ತು ಜೈವಿಕ ಗೊಬ್ಬರ, ಜೈವಿಕ ಕ್ರಿಮಿನಾಶಕಗಳನ್ನು ಹಂಚಿ ರೈತರನ್ನು ಬಹುವಾರ್ಷಿಕ ಬೆಳೆಗಳ ಕಡೆಗೆ ಸಾಗಿ ಸ್ವಾವಲಂಬನೆ ಕಡೆಗೆ ನಡೆಯಲು ಮನವೊಲಿಸುವ ಕಾರ್ಯ ನಡೆಯುತ್ತಿದೆ. ಅದೇ ರೀತಿ ಐ.ಸಿ.ಎ.ಆರ್-ಕೇಂದ್ರೀಯ ಗೆಡ್ಡೆ-ಗೆಣಸು ಬೆಳೆಗಳ ಸಂಶೋಧನಾ ಕೇಂದ್ರ, ಭುವನೇಶ್ವರ, ಒರಿಸ್ಸಾ ಕಡೆಯಿಂದ ಸುಧಾರಿತ ಸಿಹಿ ಮತ್ತು ಮರಗೆಣಸು ತಳಿಗಳ ಬಳ್ಳಿ ಹಾಗೂ ಕಡ್ಡಿಗಳನ್ನು ತರಿಸಿ ನಾಗಾಪುರದ ರೈತ ಸದಸ್ಯರ ಜಮೀನಿನಲ್ಲಿ ನಾಟಿ ಮಾಡಿಸಿದ್ದು ಮುಂದಿನ ದಿನಮಾನಗಳಲ್ಲಿ ಇವರ ಸಹಭಾಗಿತ್ವದಲ್ಲಿ ಗೆಡ್ಡೆ ಗೆಣಸು ಸಂಸ್ಕರಣಾ ಘಟಕ ಸ್ಥಾಪಿಸಿ ಮೌಲ್ಯವರ್ಧಿತ ಪದಾರ್ಥಗಳನ್ನು ತಯಾರು ಮಾಡಿ ಮಾರಾಟ ಮಾಡಲು ಯೋಜನೆ ರೂಪಿಸಿದೆ.

ಹಾಗೇಯೇ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಸಹಕಾರದೊಂದಿಗೆ 13 ಸಹಕಾರಿ ರೈತ ಉತ್ಪಾದಕರ ಸಂಸ್ಥೆಗಳಾಗಿ ನೋಂದಣಿ ಮಾಡಿಸಲಾಗಿದ್ದು ಅವುಗಳಿಗೆ ಸಂಪನ್ಮೂಲ ಸಂಸ್ಥೆಯಾಗಿ ನಮ್ಮ ಸಂಸ್ಥೆಯು ಕೆಲಸ ಮಾಡುತ್ತಿದೆ. ರೈತ ಉತ್ಪಾದಕರ ಸಂಸ್ಥೆಗಳ ಕುರಿತಾದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ರೈತರ ಮೂಲ ಸಮೀಕ್ಷೆ ಜೊತೆಗೆ ಷೇರುದಾರರಾಗಲು ಸಮುದಾಯ ಸಜ್ಜುಗೊಳ್ಳುವಿಕೆ ಮುಖಾಂತರ ಪ್ರೋತ್ಸಾಹಿಸಲಾಯಿತು. ಜೊತೆಗೆ ನಿರ್ದೇಶಕ ಮಂಡಳಿಯ ಸದಸ್ಯರುಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ತರಬೇತಿ, ಸಾಮರ್ಥ್ಯ ಬಲವರ್ಧನೆ ಮತ್ತು ಕ್ಷೇತ್ರ ಪ್ರವಾಸ ಕಾರ್ಯಗಳನ್ನು ಪೂರ್ಣಗೊಳಿಸಿದ್ದು ಅವರ ವ್ಯವಹಾರ ವೃದ್ಧಿಗೆ ಬೇಕಾದ ತರಬೇತಿಗಳನ್ನು ಮುಂದಿನ ತ್ರೈಮಾಸಿಕ ಯೋಜನೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಅದೇ ವಿಧದಲ್ಲಿ ಅನೇಕ ಹೊಸ ಯೋಜನೆಗಳಿಗಾಗಿ ಹಲವಾರು ಪಾಲುದಾರ ಸಂಸ್ಥೆಗಳ ಜೊತೆ ಚರ್ಚೆ ನಡೆದಿದ್ದು, ಕೆಲವು ಯೋಜನೆಗಳು ಸಂಸ್ಥೆಗೆ ದೊರೆತಿದ್ದು ಕಾರ್ಯ ಅನುಷ್ಠಾನಗೊಳಿಸಲು ಬೇಕಾದ ಎಲ್ಲಾ ಪೂರ್ವ ತಯಾರಿ ಕಾರ್ಯಗಳನ್ನು ಕಳೆದ ತ್ರೈಮಾಸಿಕ ಯೊಜನೆಯಲ್ಲಿ ಮಾಡಿಕೊಂಡಿದ್ದು ಮುಂದಿನ ತ್ರೈಮಾಸಿಕದಲ್ಲಿ ಅನುಷ್ಟಾನ ಕಾರ್ಯ ಪ್ರಾರಂಭವಾಗಲಿದೆ ಮತ್ತು ಇದರಿಂದ ಸಾಕಷ್ಟು ಯುವ ಜನರಿಗೆ ಉದ್ಯೋಗ ದೊರಕಿಸಿಕೊಡುವ ಕೆಲಸವನ್ನು ಸಂಸ್ಥೆಯು ಮಾಡುತ್ತಿದೆ. ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಈ ಎಲ್ಲಾ ಕಾರ್ಯಗಳಿಂದ ರಾಜ್ಯದ ಹಾಗೂ ದೇಶದ ಗಮನವನ್ನು ತನ್ನತ್ತ ಸೆಳೆಯಲು ಯಶಸ್ವಿಯಾಗಿದ್ದು ಇತರೆ ರಾಜ್ಯಗಳಿಗೆ ಇದು ಮಾದರಿಯಾಗಿದೆ. ಮತ್ತು ಇದೇ ಮಾದರಿಯ ಸಂಸ್ಥೆಗಳನ್ನು ತೆರೆಯಲು ಹೊರ ರಾಜ್ಯದ ಸರ್ಕಾರಗಳು ಉತ್ಸುಕತೆ ತೋರುತ್ತಿವೆ. ಇವೆಲ್ಲಾ ಬೆಳವಣಿಗೆಗಳು ನಮಗೆ ರೈತರ ಸಬಲೀಕರಣಕ್ಕಾಗಿ ದುಡಿಯುವ ಉತ್ಸಾಹವನ್ನು ಇಮ್ಮಡಿಗೊಳಿಸಿದೆ.

**ಡಾ. ಜಿ. ಕೆ. ಸೀತಾರಾಮು**
**ನಿರ್ದೇಶಕರು,**
**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು**

## CoE-FPOನ ಕ್ರಿಯಾಶೀಲ ಕ್ಷಣಗಳು


ಜಿಇ ವರ್ನೋವಾ ಸಂಸ್ಥೆ ರೈ.ಉ.ಉ. ಸಂ ಕೇಂದ್ರದಲ್ಲಿ ಪರಿಸರಸ್ನೇಹಿ ಸೌಲಭ್ಯಗಳ ಉದ್ಘಾಟನೆ, 11 ಏಪ್ರಿಲ್ 2025


ಬೆಸ್ಟ್ ಕ್ಲಸ್ಟರ್‌ನ ಡಾ. ಮೃಣಾಲ್ ಕುಮಾರ್ ಶರ್ಮಾ ಹಾಗೂ ಶ್ರೀ ಕೇಶವ್ ಕೆ.ಎನ್ ಅವರು ಏಪ್ರಿಲ್ 15, 2025 ರಂದು CoE-FPOಗೆ ಭೇಟಿ ನೀಡಿದರು


2025 ಏಪ್ರಿಲ್ 15 ರಂದು Moonrider.ai ಸಂಸ್ಥೆಯ ಶ್ರೀ ಶಶಾಂಕ್ ಅನಂತ್ ಹಾಗೂ ಶ್ರೀ ಪ್ರಸಾದ್ ಎನ್ ರವರೊಂದಿಗೆ ಸಭೆ


ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ (KSFCS)ನ ಮೊದಲ ನಿರ್ದೇಶಕ ಮಂಡಳಿಯ ಸಭೆಯು 2025 ಏಪ್ರಿಲ್ 24 CoE-FPO, ಬೆಂಗಳೂರಿನಲ್ಲಿ ನಡೆಯಿತು


SANJEEVINI–KSRLPS ಪ್ರೋತ್ಸಾಹಿತ ಮಹಿಳಾ ಕಿಸಾನ್ ಉತ್ಪಾದಕರ ಕಂಪನಿಗಳ ನಿರ್ದೇಶಕರಿಗೆ "ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ನಿರ್ವಹಣೆ" ಕುರಿತು ಸಾಮರ್ಥ್ಯ ವೃದ್ಧಿ ತರಬೇತಿ. 6–8 ಏಪ್ರಿಲ್ 2025


2025 ಮೇ 6 ರಂದು SELCO ಫೌಂಡೇಶನ್ ತಂಡ CoEFPOಗೆ ಭೇಟಿ



ಮೈಸೂರು ಜಿಲ್ಲೆಯ ಹುಣಸೂರು ಮತ್ತು ಎಚ್.ಡಿ.ಕೋಟೆ ತಾಲ್ಲೂಕುಗಳಲ್ಲಿ TRIFPOs ಪ್ರಗತಿ ಪರಿಶೀಲನೆ ಹಾಗೂ ಕ್ಷೇತ್ರದ ಭೇಟಿ



ದಿನಾಂಕ 6–9 ಮೇ 2025 ರಂದು ಸಂಜೀವಿನಿ–KSRLPS ಅಡಿಯಲ್ಲಿ ಮಹಿಳಾ FPO BoDs ಮತ್ತು CEO ಗಳಿಗೆ ತರಬೇತಿ ಆಯೋಜಿಸಲಾಯಿತು



ಮೇ 14, 2024 ರಂದು KAPPECನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ತಂಡದೊಂದಿಗೆ ಚರ್ಚೆ



12–16 ಮೇ 2025ರವರೆಗೆ CoE-FPO ಮತ್ತು TNIAMP ವತಿಯಿಂದ ತಮಿಳುನಾಡಿನ 10 ಜಿಲ್ಲೆಗಳ ನಿರ್ದೇಶಕರು ಮತ್ತು CEOsಗಳಿಗೆ ಐದು ದಿನಗಳ ತರಬೇತಿ ಕಾರ್ಯಕ್ರಮ



22 ಮೇ, 2025 ರಂದು, ಎಕೋಜನ್ ಸಂಸ್ಥೆ ಅವರೊಂದಿಗೆ ಎಫ್‌ಪಿಒಗೆ ಸೂಕ್ತವಾದ ಶೀತಲೀಕರಣ ಮೂಲಸೌಕರ್ಯ ಬಲಪಡಿಸುವ ಕುರಿತು ಸಹಕಾರದ ಸಾಧ್ಯತೆಗಳ ಕುರಿತು ಸಭೆ



2025 ಮೇ 26–30: COE-FPO ಮತ್ತು TNIAMP ಸಹಯೋಗದಲ್ಲಿ ತಮಿಳುನಾಡು ಎಫ್‌ಪಿಸಿಗಳಿಗೆ ತರಬೇತಿ ಕಾರ್ಯಕ್ರಮ



2025 ಮೇ 31 ರಿಂದ ಜೂನ್ 2 ರವರೆಗೆ, ತಿರುವಣ್ಣಾಮಲೈ ರೈತರಿಗೆ CoE-FPO ಮತ್ತು ತೋಟಗಾರಿಕಾ ಮಹಾವಿದ್ಯಾಲಯ, ಬೆಂಗಳೂರು ಮೌಲ್ಯವರ್ಧನೆ ಕುರಿತ 3 ದಿನಗಳ ತರಬೇತಿ



2025ರ ಜೂನ್ 2ರಂದು ನಬಾರ್ಡ್ CGM ಹಾಗೂ ನಿಗಮ ಮಂಡಳಿಯ ಸದಸ್ಯರೊಂದಿಗೆ ಚರ್ಚೆ



2025ರ ಜೂನ್ 2ರಂದು, ICAR-ATARI ಝೋನ್ XI ನಿರ್ದೇಶಕರ ಜೊತೆ ಮಾತುಕತೆ ನಡೆಸಿ KVKಗಳೊಂದಿಗೆ ಸಹಕಾರದ ಅವಕಾಶಗಳನ್ನು ಪರಿಶೀಲಿಸಲಾಯಿತು



2025ರ ಜೂನ್ 11ರಂದು S M Sehgal Foundation ತಂಡದ ಜೊತೆ ಕಾರ್ಯ ಯೋಜನೆ ಬಗ್ಗೆ ಸಭೆ



IISC- ಬೆಸ್ಟ್ ಕ್ಲಸ್ಟರ್‌ಗೆ ಭೇಟಿ



COEFPO ಮತ್ತು ತೆಂಗಿನ ನಾರಿನ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಬಸವನಗಿರಿ ಎಫ್‌ಪಿಒನಲ್ಲಿ ಆದಿವಾಸಿ ಕೌಶಲ್ಯಾಭಿವೃದ್ಧಿ ಯೋಜನೆ ಆರಂಭ



COEFPO ಪರಿಸರ ಪಾಲನಾ ನವೀನತೆಗಳಲ್ಲಿ ಸಹಭಾಗಿತ್ವದ ಅವಕಾಶಗಳನ್ನು ಅನ್ವೇಷಿಸಲು ECO365 ಸಂಸ್ಥೆ ಅವರೊಂದಿಗೆ ಸಹಯೋಗ ಸಭೆ



ನಾಶಿಕ್‌ನ ಸಹ್ಯಾದ್ರಿ ಫಾರ್ಮ್‌ನಲ್ಲಿ ಜೂನ್ 11–13, 2025ರಂದು ಸಿಇಒ ಮತ್ತು ನಿರ್ದೇಶಕರಿಗೆ ಮೂರು ದಿನಗಳ ತರಬೇತಿ ಹಾಗೂ ಪ್ರವಾಸ ಕಾರ್ಯಕ್ರಮ




ATMA–SAME-SSEPERS ಯೋಜನೆಯಡಿಯಲ್ಲಿ ಜೂನ್ 12–14ರಂದು ತಿರುವಣ್ಣಾಮಲೈ ರೈತರಿಗೆ ಮೌಲ್ಯವರ್ಧನೆಯ ಕುರಿತು ತರಬೇತಿ








ATMA – SAME-SSEPERS ಯೋಜನೆಯಡಿ ತಮಿಳುನಾಡಿನ ತಿರುವಣ್ಣಾಮಲೈ ರೈತರಿಗೆ ಕೊಯ್ಲೋತ್ತರ ನಿರ್ವಹಣೆ ಹಾಗೂ ಮೌಲ್ಯವರ್ಧನೆ ಕುರಿತು ತರಬೇತಿ ಕಾರ್ಯಕ್ರಮವನ್ನು CoE-FPO ಹಾಗೂ ತೋಟಗಾರಿಕಾ ಮಹಾವಿದ್ಯಾಲಯ, ಬೆಂಗಳೂರು ಇವರ ಸಹಯೋಗದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. 16–18 ಜೂನ್ 2025: ತುರಿಂಜಾಪುರಂ ಬ್ಲಾಕ್, 19–21 ಜೂನ್ 2025: ಕಿಲ್ಪೆನ್ನತೂರ್ ಬ್ಲಾಕ್, 23–25 ಜೂನ್ 2025: ವೆಸ್ಟ್ ಆರ್ಣಿ ಬ್ಲಾಕ್



2025ರ ಜೂನ್ 20 ರಂದು, ಇಕೋಟ್ಯಾಕ್ ಬ್ಯಾಗ್ಸ್‌ನ ಮಾರಾಟ ಮುಖ್ಯಸ್ಥ ಮತ್ತು ಹಿರಿಯ ಮಾರಾಟ ಕಾರ್ಯನಿರ್ವಾಹಕರವರೊಂದಿಗೆ ಸಭೆ



2025ರ ಜೂನ್ 25ರಂದು, ಖೇತಿವಾಲಾ ಸಂಸ್ಥೆಯ ಸ್ಥಾಪಕ ಹಾಗೂ ಸಿಇಒ ಶ್ರೀ ಲಕ್ಷ್ಮಣ್ ಕೆ ಅವರೊಂದಿಗೆ ಸಂವಾದ



2025ರ ಜೂನ್ 26ರಂದು, APEDA ಪ್ರಾದೇಶಿಕ ಕಚೇರಿಯ ಪ್ರಧಾನ ವ್ಯವಸ್ಥಾಪಕರು ಮತ್ತು ಪ್ರಾದೇಶಿಕ ಮುಖ್ಯಸ್ಥರೊಂದಿಗೆ ಸಂವಾದ



TSP ಅಡಿಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಭಾಗವಾಗಿ, 2025ರ ಜೂನ್ 27ರಂದು ಮೈಸೂರು ಜಿಲ್ಲೆ ನಾಗಾಪುರ ಗ್ರಾಮದಲ್ಲಿ ಗೆಡ್ಡ-ಗೆಣಸು ಆಧಾರಿತ ಬೆಳೆಗಳ ಕುರಿತು ತರಬೇತಿ ಕಾರ್ಯಕ್ರಮ



ಬಸವನಗಿರಿ ಹಾಡಿಗೆ ಭೇಟಿ ನೀಡಿದ ಡಾ. ಸೀತಾರಾಮು ಜಿ.ಕೆ, ನಿರ್ದೇಶಕರು, ತೆಂಗಿನ ನಾರು ಆಧಾರಿತ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿದ ನಾಲ್ಕು ತಿಂಗಳ ತರಬೇತಿ ಕಾರ್ಯಕ್ರಮದ ಪ್ರಗತಿಯನ್ನು ಪರಿಶೀಲಿಸಿದರು.




2025ರ ಜೂನ್ 27ರಂದು, ಬಾಲೆಲೆ ಪಿಎಸಿಸಿಎಸ್, ಪೊನ್ನಂಪೇಟೆಗೆ ನಿರ್ದೇಶಕರ ಭೇಟಿ



2025ರ ಜೂನ್ 28ರಂದು, ಹುಣಸೂರು ತಾಲ್ಲೂಕಿನ ನಾಗಾಪುರ ಹಾಡಿಯಲ್ಲಿ, TSP ಅಡಿಯಲ್ಲಿ ತರಬೇತಿ ಮತ್ತು ತೋಟಗಾರಿಕೆ ಪರಿಕರ ವಿತರಣಾ ಕಾರ್ಯಕ್ರಮ





ಕರ್ನಾಟಕ ತೋಟಗಾರಿಕೆ ಇಲಾಖೆ ಹಾಗೂ CoE-FPO ಸಂಯುಕ್ತವಾಗಿ ರಾಜ್ಯದ ವಿವಿಧ ಜಿಲ್ಲೆಗಳ ಅಮೃತ ಎಫ್‌ಪಿಓಗಳ ಸಿ.ಇ.ಓಗಳು ಮತ್ತು ನಿರ್ದೇಶಕರಿಗೆ ಸಾಮರ್ಥ್ಯಭಿವೃದ್ಧಿ ತರಬೇತಿ ಕಾರ್ಯಕ್ರಮಗಳು. 17–18 ಜೂನ್: ಹಾಸನ, 20–21 ಜೂನ್: ಶಿವಮೊಗ್ಗ







24 ಜೂನ್: ಚಾಮರಾಜನಗರ, 27 ಜೂನ್: ಸಿರಸಿ, 28 ಜೂನ್: ಉಡುಪಿ, 1–2 ಜುಲೈ: ವಿಜಯಪುರ, 11–12 ಜುಲೈ: ಕೊಪ್ಪಳ.



# ಕೊಯ್ಲೋತ್ತರ ಸಂಸ್ಕರಣೆ:

## ಎಫ್‌ಪಿಓಗಳ ಆದಾಯ ದ್ವಿಗುಣಗೊಳ್ಳುವ ಮಾರ್ಗೋಪಾಯ

- ಡಾ. ಸದಾನಂದ ಜಿ. ಕೆ, ಉಪ-ನಿರ್ದೇಶಕರು, ರೈ.ಉ.ಸಂ.ಉ. ಕೇಂದ್ರ

### ಪ್ರಸ್ತುತ ಆರ್ಥಿಕ ಪರಿಸ್ಥಿತಿ ಮತ್ತು ಗ್ರಾಹಕರ ಪ್ರವೃತ್ತಿ:

ಪ್ರಸ್ತುತ ಜಗತ್ತಿನಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಜನರು ಅವರ ವಿವಿಧ ಅಗತ್ಯಗಳಿಗೆ ಖರ್ಚು ಮಾಡುವ ಸಾಮರ್ಥ್ಯ ಕ್ರಮೇಣ ಹೆಚ್ಚುತ್ತಿದೆ. ಗ್ರಾಹಕರು ಗುಣಮಟ್ಟದ ಉತ್ಪನ್ನಗಳ ಖರೀದಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಮತ್ತು ಅದಕ್ಕಾಗಿ ಹೆಚ್ಚು ಬೆಲೆ ವ್ಯಯಿಸಲು ಸಿದ್ಧರಿದ್ದಾರೆ. ರಾಷ್ಟ್ರೀಯ ಸಂಖ್ಯಾ ಶಾಸ್ತ್ರ ಕಚೇರಿ (NSO) ಮತ್ತು ಇತರೆ ಅಧ್ಯಯನಗಳ ಪ್ರಕಾರ, ಮಧ್ಯಮ ವರ್ಗ ಮತ್ತು ಮೇಲ್ಮಧ್ಯಮ ವರ್ಗದ ಖರೀದಿ ಸಾಮರ್ಥ್ಯ ಕಳೆದ ದಶಕದಲ್ಲಿ ಶೇ.30 ಕ್ಕೂ ಹೆಚ್ಚು ಏರಿಕೆಯಾಗಿದೆ. ಈ ಏರಿಕೆಯ ಪರಿಣಾಮವಾಗಿ, ಗ್ರಾಹಕರು ಉತ್ತಮ ಗುಣಮಟ್ಟದ, ಮೌಲ್ಯವರ್ಧಿತ, ಆಕರ್ಷಕ ಪ್ಯಾಕೇಜಿಂಗ್ ಹೊಂದಿದ ಬ್ರಾಂಡೆಡ್ ಉತ್ಪನ್ನಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಇದು ಮಾರುಕಟ್ಟೆಯಲ್ಲಿ ಗ್ರಾಹಕರೇ ಅಂತಿಮ ತೀರ್ಪುಗಾರರು ಎಂಬ ತತ್ವವನ್ನು ಬಲ ಪಡಿಸುತ್ತದೆ. ಆದ್ದರಿಂದ, ಉತ್ಪಾದಕರು, ಸಂಸ್ಕರಣೆ ಮಾಡುವವರು ಮತ್ತು ವ್ಯಾಪಾರಿಗಳು ತಮ್ಮ ಕಾರ್ಯತಂತ್ರಗಳನ್ನು ಗ್ರಾಹಕರ ಅಗತ್ಯತೆ ಮತ್ತು ಇಷ್ಟಗಳಿಗೆ ಹೊಂದಿಸಿಕೊಳ್ಳಬೇಕು.

### ಎಫ್‌ಪಿಓಗಳ ಪ್ರಸ್ತುತ ಸ್ಥಿತಿ ಮತ್ತು ಮೌಲ್ಯವರ್ಧನೆ ಅಗತ್ಯತೆ:

ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಿದಾಗ ಉತ್ಪಾದಕರಿಗೆ 3–5 ಪಟ್ಟು ಹೆಚ್ಚುವರಿ ಲಾಭಾಂಶ ದೊರೆಯಬಹುದು. ಆದರೆ ಬಹುತೇಕ ಎಫ್‌ಪಿಓಗಳು ಇನ್ನೂ ಪ್ರಾಥಮಿಕ ಉತ್ಪಾದನೆ ಹಂತದಲ್ಲೇ ನಿಂತಿವೆ ಮತ್ತು ಉತ್ಪನ್ನಗಳನ್ನು ಹೋಲ್‌ಸೇಲ್ ವ್ಯಾಪಾರಿಗಳಿಗೆ ಕಡಿಮೆ ಲಾಭದಲ್ಲಿ ಮಾರಾಟ ಮಾಡುತ್ತಿವೆ. ಕೆಲವು ಅಧ್ಯಯನಗಳ ಅಂದಾಜಿನ ಪ್ರಕಾರ, ಭಾರತದಲ್ಲಿ ಕೇವಲ ಶೇ.8–10 ಎಫ್‌ಪಿಓಗಳೇ ಮೌಲ್ಯವರ್ಧನೆ ಅಥವಾ ಸಂಸ್ಕರಣೆ ಹಂತಕ್ಕೆ ಪ್ರವೇಶಿಸಿವೆ. ಹೆಚ್ಚಿನ ಲಾಭ ಗಳಿಸಲು, ಪ್ರಾಥಮಿಕ ಉತ್ಪಾದನೆಯ ಜೊತೆಗೆ ದ್ವಿತೀಯ ಕೃಷಿ (Secondary Agriculture), ಅಂದರೆ ಸಂಸ್ಕರಣೆ, ಪ್ಯಾಕೇಜಿಂಗ್, ಬ್ರಾಂಡಿಂಗ್, ಮಾರುಕಟ್ಟೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ ಮತ್ತು ಇದರಿಂದ ಕೇವಲ 3-4 ವರ್ಷಗಳಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವುದು ಸಾಧ್ಯ.

ರೈತ ಉತ್ಪಾದಕರ ಕಂಪನಿಗಳಲ್ಲಿ ರೈತರು ಉತ್ಪಾದನೆಯ ನಂತರ ಸರಿಯಾದ ಕೊಯ್ಲೋತ್ತರ ನಿರ್ವಹಣೆ (ಸ್ವಚ್ಛತೆ, ಶ್ರೇಣೀಕರಣ, ಸಂಗ್ರಹಣೆ) ಮಾಡಬೇಕು. ನಂತರ, ಉತ್ಪಾದನೆಯ ಒಂದು ಭಾಗವನ್ನು ಉಳಿಸಿಕೊಂಡು ಮೌಲ್ಯವರ್ಧನೆಗೆ ಮೀಸಲಿಟ್ಟು, ಉಳಿದ ಭಾಗವನ್ನು B2B (ಬಿ2ಬಿ) ಮಾರಾಟದ ಮೂಲಕ ತಕ್ಷಣದ ಆದಾಯ ಪಡೆಯಬೇಕು. ಉಳಿಸಿಕೊಳ್ಳಲಾದ ಉತ್ಪನ್ನಗಳನ್ನು ಸಂಸ್ಕರಣೆ ಮಾಡಿ ಆಕರ್ಷಕ ಪ್ಯಾಕೇಜಿಂಗ್ ಮತ್ತು ಬ್ರಾಂಡಿಂಗ್ ಮೂಲಕ ಮಾರಬಹುದು. ಮಾರುಕಟ್ಟೆ ವಿಸ್ತರಿಸಲು ಅನೇಕ ಮಾರ್ಗಗಳಾದ ಸ್ಥಳೀಯ ಮಾರುಕಟ್ಟೆ, ಆನ್‌ಲೈನ್ ಮತ್ತು ರಫ್ತು ಮಾರುಕಟ್ಟೆಗಳ ಮೂಲಕ ಹೆಚ್ಚಿನ ಗ್ರಾಹಕರನ್ನು ತಲುಪಬೇಕು. ಸಾಮಾಜಿಕ ಜಾಲತಾಣಗಳ ಮೂಲಕ ಗ್ರಾಹಕರ ಮನೆ ಮುಟ್ಟಬೇಕು. ಸಂಸ್ಕರಣೆಗಾಗಿ ಸ್ವಂತದ ಸಂಸ್ಕರಣಾ ಘಟಕ ಸ್ಥಾಪಿಸಬೇಕು. ಸಂಸ್ಕರಣಾ ಘಟಕಗಳು ಕ್ಲಸ್ಟರ್ ಆಧಾರಿತವಾಗಿದ್ದು, ಕಚ್ಚಾವಸ್ತು ವರ್ಷಪೂರ್ತಿ ಲಭ್ಯವಿರುವಂತೆಯೇ ಬಹು ಉತ್ಪನ್ನ ಸಾಮರ್ಥ್ಯ ಹೊಂದಿರಬೇಕು. ಉದಾಹರಣೆಗೆ, ಒಂದು ಸಾಮಾನ್ಯ ಜ್ಯೂಸ್ ಘಟಕದಲ್ಲಿ ಕೇವಲ ಒಂದು ನಿರ್ದಿಷ್ಟ ಹಂಗಾಮಿನಲ್ಲಿ ಮಾತ್ರವಲ್ಲದೆ ವರ್ಷಪೂರ್ತಿ ಬರುವ ವಿವಿಧ ಹಣ್ಣುಗಳ ಜ್ಯೂಸ್ ತಯಾರಿಸಲು ಸಾಧ್ಯವಿರಬೇಕು. ಕಂಪನಿಯ ಯಾವುದೇ ಸಂಸ್ಕರಣಾ ಘಟಕಗಳನ್ನು ಉಪಯೋಗ ಮಾಡದ ಕಾಲದಲ್ಲಿ ಅವಶ್ಯಕತೆ ಇರುವವರಿಗೆ ಬಾಡಿಗೆ ನೀಡುವ ಮೂಲಕವು ನಿರಂತರ ಆದಾಯ ಗಳಿಸಬಹುದು.

### ಪೂರೈಕೆ ಆಧಾರದಿಂದ ಬೇಡಿಕೆ ಆಧಾರಿತ ಉತ್ಪಾದನೆಯ ಕಡೆಗೆ:

ಸಾಂಪ್ರದಾಯಿಕ ಪೂರೈಕೆ-ಆಧಾರಿತ ಉತ್ಪಾದನಾ ಕ್ರಮದಲ್ಲಿ, ಉತ್ಪಾದಕರು ತಮ್ಮಲ್ಲಿ ಲಭ್ಯವಿರುವ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುತ್ತಾರೆ. ಇದರಿಂದ ಕೆಲವೊಮ್ಮೆ ಮಾರುಕಟ್ಟೆಯಲ್ಲಿ ಅವಶ್ಯಕತೆಗೆ ಮೀರಿದ ಪೂರೈಕೆ ಉಂಟಾಗಿ, ಬೆಲೆ ಕುಸಿತ ಉಂಟಾಗುತ್ತದೆ. ಆದರೆ ಬೇಡಿಕೆ-ಆಧಾರಿತ ಉತ್ಪಾದನಾ ಕ್ರಮದಲ್ಲಿ, ಮೊದಲು ಗ್ರಾಹಕರು ಯಾವ ಉತ್ಪನ್ನ, ರೂಪ, ಬೆಲೆ ಮತ್ತು ಗುಣಮಟ್ಟದಲ್ಲಿ ಬಯಸುತ್ತಾರೆ ಎಂಬುದನ್ನು ಅಧ್ಯಯನ ಮಾಡಿ, ಅದರ ಪ್ರಕಾರ ಉತ್ಪಾದನೆ ಮತ್ತು ಮೌಲ್ಯವರ್ಧನೆ ಮಾಡಲಾಗುತ್ತದೆ. ಹಲವು ಸಂಸ್ಥೆಗಳ ಸಮೀಕ್ಷೆ ಪ್ರಕಾರ, ಬೇಡಿಕೆ-ಆಧಾರಿತ ಉತ್ಪನ್ನಾಭಿವೃದ್ಧಿಯು ಮಾರುಕಟ್ಟೆ ಸ್ವೀಕೃತಿಯನ್ನು ಶೇ.40-50 ಹೆಚ್ಚಿಸುತ್ತದೆ.

### ಸರ್ಕಾರದ ಯೋಜನೆಗಳು ಮತ್ತು ಅವಕಾಶಗಳು:

ಪ್ರಧಾನ ಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಔಪಚಾರಿಕೀಕರಣ (PMFME), ಕೃಷಿ ಮೂಲಸೌಕರ್ಯ ನಿಧಿ (AIF) ಮುಂತಾದ ಯೋಜನೆಗಳು ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ, ಕ್ರೆಡಿಟ್ ಗ್ಯಾರಂಟಿ ಯೋಜನೆಯ ಮೂಲಕ ಸಾಲ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತವೆ. ಅಲ್ಲದೇ ವನಧನ ವಿಕಾಸ ಕೇಂದ್ರಗಳ ಮೂಲಕ ಕಿರು ಅರಣ್ಯ ಮತ್ತು ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡಿ ಮಾರಾಟಮಾಡಲು ಕೇಂದ್ರ ಸರ್ಕಾರ ಸಹಾಯಹಸ್ತ ಚಾಚಿದೆ. ಹಾಗೆಯೇ ಸಂಸ್ಕರಣಾ ಘಟಕ ಮತ್ತು ಶೀತಲ ಗೃಹ ನಿರ್ಮಾಣಕ್ಕಾಗಿ ಬ್ಯಾಂಕ್ನಲ್ಲಿ ಸಾಲ ಮತ್ತು ಅನೇಕ ಇಲಾಖೆಗಳ ಮೂಲಕ ಸಹಾಯಧನ ನೀಡಲು ಅವಕಾಶಗಳಿವೆ. ಆದರೆ ಬಹುತೇಕ ರೈತ ಉತ್ಪಾದಕ ಸಂಸ್ಥೆಗಳು ಇದರ ಪ್ರಯೋಜನ ಪಡೆಯುತ್ತಿಲ್ಲ. ಸರ್ಕಾರದ ಈ ತರಹದ ಅನೇಕ ಅವಕಾಶಗಳನ್ನು ಸಂಪೂರ್ಣ ಬಳಸಿಕೊಂಡರೆ ಎಫ್‌ಪಿಓಗಳ ಏಳಿಗೆಗೆ ಸಾಕಷ್ಟು ಅವಕಾಶವಿದೆ.

### ನೆಲ್ಲಿಕಾಯಿ ಮೌಲ್ಯವರ್ಧನೆ: ಒಂದು ಉದಾಹರಣೆ

ನೆಲ್ಲಿಕಾಯಿ ಸಾಮಾನ್ಯವಾಗಿ ಕೇವಲ ₹30-50 ಪ್ರತಿ ಕಿಲೋಗ್ರಾಂ ದರದಲ್ಲಿ ತಾಜಾ ಹಣ್ಣಿನಂತೆ ಮಾರಾಟವಾಗುತ್ತದೆ. ಇದು ಕೃಷಿ ಉತ್ಪನ್ನದ ಪ್ರತಿಯೊಂದು ಘಟಕದಿಂದ ಗರಿಷ್ಠ ಆದಾಯ ಪಡೆಯಬಹುದಾದ ಸಮಗ್ರ ಮೌಲ್ಯ ಸರಪಳಿಯ ಮೊದಲ ಹಂತವನ್ನು ಮಾತ್ರ ಪ್ರತಿನಿಧಿಸುತ್ತದೆ. ನೆಲ್ಲಿಕಾಯಿಯ ಸಂಪೂರ್ಣ ಬಳಕೆಯ ಸಾಮರ್ಥ್ಯವನ್ನು ಪರಿಶೀಲಿಸಿದಾಗ, ಒಂದೇ ವಸ್ತುವಿನಿಂದ ಹಲವಾರು ಆದಾಯ ಮೂಲಗಳನ್ನು ಕಂಡುಹಿಡಿಯಬಹುದು. ಪ್ರತಿ ಕಿಲೋಗ್ರಾಂ ನೆಲ್ಲಿಕಾಯಿಯಿಂದ ಸುಮಾರು 200 ಮಿಲಿ ಲೀಟರ್ ಗಾತ್ರದ 15 ಬಾಟಲ್ ಪಾನೀಯ ತಯಾರಿಸಬಹುದು. ಇದಕ್ಕೆ ಆಗುವ ಉತ್ಪಾದನೆಯ ಅಂದಾಜು ವೆಚ್ಚ ₹100 ಆಗಿದ್ದು, ಪ್ರತಿ ಬಾಟಲ್ಗೆ ₹20 ದರದಲ್ಲಿ ಮಾರಾಟ ಮಾಡಿದರೆ ₹300 ಆದಾಯ. ಅಂದರೆ ₹200 ಲಾಭ ಗಳಿಸಬಹುದು, ಇದು ಮೂಲ ವೆಚ್ಚದ ಮೇಲೆ 200% ಲಾಭಾಂಶ. ಈ ಮಾದರಿಯು ಮೌಲ್ಯವರ್ಧನೆ ರೈತರ ಆದಾಯವನ್ನು ಹೇಗೆ ದ್ವಿಗುಣಗೊಳಿಸಬಹುದು ಎಂಬುದನ್ನು ತೋರಿಸುತ್ತದೆ. ಈ ರೀತಿಯ ಮೌಲ್ಯವರ್ಧನೆ ಮಾದರಿಯನ್ನು ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿಗಳು ತಮ್ಮ ಕಾರ್ಯಾನುಭವ ತರಬೇತಿಯ ಸಂದರ್ಭದಲ್ಲಿ ಕಾರ್ಯಗತಗೊಳಿಸಿ ಪ್ರಾಯೋಗಿಕವಾಗಿ ಸಾಬೀತು ಮಾಡಿದ್ದಾರೆ. ಇದೇ ತರಹದ ದ್ವಿತೀಯ ಮತ್ತು ತೃತೀಯ ಹಂತದ ಸಂಸ್ಕರಣಾ ಚಟುವಟಿಕೆಗಳಲ್ಲಿ ಎಫ್‌ಪಿಓಗಳು ಸಕ್ರಿಯವಾಗಿ ಪಾಲ್ಗೊಂಡು ದೀರ್ಘಕಾಲಿಕವಾಗಿ ಯೋಜನೆಗಳನ್ನು ರೂಪಿಸಿಕೊಂಡು ಸಂಪೂರ್ಣ ಮೌಲ್ಯ ಸರಪಳಿಯಲ್ಲಿ ಪ್ರಮುಖ ಪಾತ್ರವಹಿಸಬೇಕು. ಜೊತೆಗೆ, ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿ, ಹೆಚ್ಚುವರಿ ಆದಾಯ ಪಡೆಯುವುದು ಮತ್ತು ಕೃಷಿಯನ್ನು ಒಂದು ಉದ್ದಿಮೆಯಾಗಿ ಪರಿಗಣಿಸುವುದು ದೇಶದ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುತ್ತದೆ. ಯಾವುದೇ ರೈತ ಉತ್ಪಾದಕ ಕಂಪನಿಗಳು ಮೌಲ್ಯವರ್ಧನೆ ಮಾಡಲು ಮುಂದಾದರೆ, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ತಾಂತ್ರಿಕ ಮಾಹಿತಿ ಮತ್ತು ಸೂಕ್ತ ಮಾರ್ಗದರ್ಶನ ನೀಡಲು ಸದಾ ಸಿದ್ಧವಿರುತ್ತದೆ.

# ಎಫ್‌ಪಿಓಗಳ ಡಿಜಿಟಲ್ ಸಬಲೀಕರಣ:
## ರೈತರಿಗಾಗಿ ಸುಸ್ಥಿರ ಮಾರಾಟ ಮಾರ್ಗಗಳನ್ನು ರೂಪಿಸುವುದು


-ರಿತೇಶ್ ಜಿ. ಕೆ, ರೈ.ಉ.ಸಂ.ಉ.ಕೇಂದ್ರ, ಬೆಂಗಳೂರು




ಇಂದಿನ ಡಿಜಿಟಲ್ ಆಧಾರಿತ ಆರ್ಥಿಕತೆಯಲ್ಲಿ, ರೈತ ಉತ್ಪಾದಕರ ಸಂಸ್ಥೆಗಳು (FPOs) ಇ-ಮಾರ್ಕೆಟಿಂಗ್ ಅನ್ನು ಆಯ್ಕೆಯಾಗಿ ಮಾತ್ರವಲ್ಲ, ಅಗತ್ಯವನ್ನಾಗಿ ಪರಿಗಣಿಸುತ್ತಿವೆ. ಇ-ಮಾರ್ಕೆಟಿಂಗ್‌ನ ಮೂಲಕ ಪರಂಪರಾಗತ ಮಾರುಕಟ್ಟೆಯ ಅಡೆತಡೆಗಳನ್ನು ಸುಲಭವಾಗಿ ದಾಟಿ ಗ್ರಾಹಕರೊಂದಿಗೆ ನೇರ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತಿದೆ. ಇದರಿಂದ ಸಣ್ಣ ರೈತರಿಗೆ ನೇರ ಲಾಭ, ಉತ್ತಮ ಬೆಲೆ ಹಾಗೂ ಮಾರುಕಟ್ಟೆ ಪ್ರವೇಶ ಲಭ್ಯವಾಗುತ್ತಿದೆ.

ಡಿಜಿಟಲ್ ಪರಿವರ್ತನೆಯ ಈ ಯುಗದಲ್ಲಿ, ಇ-ಪ್ಲಾಟ್‌ಫಾರ್ಮ್‌ಗಳು ಎಫ್‌ಪಿಓಗಳಿಗೆ ಬೆಂಬಲವಾಗಿ ಪರಿಣಮಿಸುತ್ತಿದ್ದು, ಮಾರುಕಟ್ಟೆಯಲ್ಲಿನ ಸ್ಪರ್ಧೆಗೆ ತಕ್ಕಂತೆ ಬೆಳೆ ಬೆಳೆಯಲು ನೆರವಾಗುತ್ತಿದೆ.

### ಎಫ್‌ಪಿಓಗಳಿಗಾಗಿ ಇ-ಮಾರ್ಕೆಟಿಂಗ್‌ನ ಮಹತ್ವ



ಇ-ಮಾರ್ಕೆಟಿಂಗ್ ಎಫ್‌ಪಿಓಗಳಿಗೆ ಉತ್ತಮ ಬೆಲೆ ಹಾಗೂ ಮಾರುಕಟ್ಟೆ ಪ್ರವೇಶವನ್ನು ವಿಸ್ತರಿಸುವ ಅಪೂರ್ವ ಅವಕಾಶಗಳನ್ನು ಒದಗಿಸುತ್ತಿದೆ. ಮಧ್ಯವರ್ತಿಗಳನ್ನು ತಪ್ಪಿಸುವ ಮೂಲಕ, ರೈತರು ತಮ್ಮ ಉತ್ಪನ್ನಗಳಿಂದ ಶೇ.20-30 ಹೆಚ್ಚು ಮೌಲ್ಯ ಗಳಿಸಬಹುದಾಗಿದೆ. ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಮಾರುಕಟ್ಟೆ ಮಾಹಿತಿ ತಕ್ಷಣ ಲಭ್ಯವಾಗುವುದರಿಂದ ರೈತರು ಯೋಚಿಸಿ ಬೆಲೆ ನಿರ್ಧಾರ ಮಾಡಲು ನೆರವಾಗುತ್ತದೆ.

ಇದೇ ರೀತಿ, ನಿರಂತರ ಆನ್‌ಲೈನ್ ಹಾಜರಾತಿ ಗ್ರಾಹಕರಲ್ಲಿ ನಂಬಿಕೆ ಹಾಗೂ ಬ್ರ್ಯಾಂಡ್ ಪರಿಚಯ ಉಂಟುಮಾಡುತ್ತದೆ. ಇದು ನೈಸರ್ಗಿಕ ಹಾಗೂ ವಿಶೇಷ ಕೃಷಿ ಉತ್ಪನ್ನಗಳ ಪ್ರೀಮಿಯಂ ಮೌಲ್ಯ ಸ್ಥಾಪನೆಗೆ ಅತ್ಯಂತ ಮುಖ್ಯವಾಗಿದೆ.

**ಡಿಜಿಟಲ್ ಯಶಸ್ಸಿನ ಸರಳ ದಾರಿ: ಸರಳವಾಗಿ ಪ್ರಾರಂಭಿಸಿ, ಬುದ್ಧಿವಂತಿಕೆಯಿಂದ ವಿಸ್ತರಿಸಿ**

### ವಾಟ್ಸಾಪ್ ಬಿಸಿನೆಸ್: ನಿಮ್ಮ ಆನ್‌ಲೈನ್ ಅಂಗಡಿ

ಈಗಾಗಲೇ ಭಾರತದಲ್ಲಿ 400 ಮಿಲಿಯನ್ ಜನರು ಬಳಸುತ್ತಿರುವ ಉಚಿತ ಪ್ಲಾಟ್‌ಫಾರ್ಮ್ ವಾಟ್ಸಾಪ್ ಬಿಸಿನೆಸ್, ಯಾವುದೇ ಎಫ್‌ಪಿಓಗೆ ಡಿಜಿಟಲ್ ಮಾರುಕಟ್ಟೆಗೆ ಪ್ರವೇಶಿಸುವ ಅತ್ಯಂತ ಸುಲಭ ಮಾರ್ಗವಾಗಿದೆ. ಉತ್ತಮ ಗುಣಮಟ್ಟದ ಫೋಟೋಗಳೊಂದಿಗೆ ಉತ್ಪನ್ನ ಕ್ಯಾಟಲಾಗ್ ತಯಾರಿಸಿ, ಕೃಷಿ ಕಥೆಗಳು ಅಥವಾ ಪ್ರಕ್ರಿಯೆಗಳ ಕುರಿತು ವಿಡಿಯೋಗಳ ಮೂಲಕ ಹಂಚಿಕೊಂಡು, ಹಾಗೂ ಗ್ರಾಹಕರೊಂದಿಗೆ ನೇರ ಸಂಪರ್ಕದಲ್ಲಿರಲು ಸಹಕಾರಿ.

ಯಶಸ್ವಿ ಎಫ್‌ಪಿಓಗಳು ಹೇಳುವಂತೆ, ಶೇ. 30-40 ಮಾರಾಟ ಅಥವಾ ಪುನಃ ಖರೀದಿ ವಾಟ್ಸಾಪ್ ಶಿಫಾರಸುಗಳ ಮೂಲಕಲೇ ಆಗುತ್ತಿದೆ. ಈ ಮೂಲಕ, ಇದು ವಿಶ್ವಾಸದ ಮಾರ್ಗವಾಗಿ ಬೆಳೆದಿದೆ.



### ಸಾಮಾಜಿಕ ಮಾಧ್ಯಮ ಪಾರದರ್ಶಕತೆ: ಎಫ್‌ಪಿಓಗಳಿಗಾಗಿ ಮಿಡಿಯಾ ಪರಿಸರ ನಿರ್ಮಾಣ

ಸಾಮಾಜಿಕ ಮಾಧ್ಯಮಗಳಲ್ಲಿ Instagram ತೋಟದಿಂದ ತಟ್ಟೆಗೆ (farm-to-fork) ದೃಶ್ಯಾತ್ಮಕ ಕಥಾನಕಗಳನ್ನು ಹಂಚಿಕೊಳ್ಳಲು ಸೂಕ್ತ ವೇದಿಕೆಯಾಗಿದ್ದು, ಗ್ರಾಹಕರ ಅನುಭವಗಳು, ಪ್ಯಾಕಿಂಗ್ ವಿಧಾನಗಳು ಹಾಗೂ ಕೊಯ್ಲೋತ್ತರ ಕಾರ್ಯವಿಧಾನದ ವಿಡಿಯೋಗಳ ಮೂಲಕ ಭಾವನಾತ್ಮಕ ಸಂಪರ್ಕವನ್ನು ನಿರ್ಮಿಸುತ್ತವೆ.

LinkedIn ಮೂಲಕ B2B ಖರೀದಿದಾರರು, ರಿಟೇಲ್ ವಿತರಕರು ಹಾಗೂ ಸಂಸ್ಥಾತ್ಮಕ ಗ್ರಾಹಕರ (ಪ್ರಸಿದ್ಧ ಹೋಟೆಲ್‌ಗಳು, ಕಾರ್ಪೊರೇಟ್ ಕ್ಯಾಂಟೀನ್‌ಗಳು) ಜೊತೆ ಸಂಪರ್ಕ ಸಾಧಿಸಬಹುದು.

Facebook ನ ಬಳಕೆ ಮೂಲಕ ನಿಶ್ಚಿತ ನಗರ ಪ್ರದೇಶದ ಸಾಕಷ್ಟು ಸಾವಯವ ಮತ್ತು ಗುಣಮಟ್ಟದ ಉತ್ಪನ್ನಗಳನ್ನು ಆಸಕ್ತ ಗ್ರಾಹಕರಿಗೆ ಗುರಿಯಾಗಿಸುವ ಜಾಹೀರಾತುಗಳನ್ನು ಹಾಕಬಹುದು, ಇದು ಮಾರಾಟ ವೃದ್ಧಿಗೆ ಸಹಕಾರಿ.

## ಡಿಜಿಟಲ್ ಪ್ರಸಿದ್ಧಿಯ ಬಲವೇ ಎಫ್.ಪಿ.ಓ ಮತ್ತು ಗ್ರಾಹಕರಿಗೆ ನಂಬಿಕೆಯ ದಾರಿ

ಸರಳ ವೆಬ್‌ಸೈಟ್ ಅಥವಾ ಚೆನ್ನಾಗಿ ನಿರ್ವಹಿಸಲಾದ ಫೇಸ್‌ಬುಕ್ ಪುಟವು ನಿಮ್ಮ ಸಂಸ್ಥೆಯ ಡಿಜಿಟಲ್ ಮುಖವಾಗಿದ್ದು, ಇದು ಪರಂಪರೆಯ ಮಾರುಕಟ್ಟೆಗಳಲ್ಲಿ ಸಿಗದ ವೈವಿಧ್ಯತೆ ಮತ್ತು ಗ್ರಾಹಕರಲ್ಲಿ ನಂಬಿಕೆ ಮೂಡಿಸುತ್ತದೆ.

ರೈತರ ಪರಿಚಯ ವಿವರಗಳು, ಪ್ರಮಾಣೀಕರಣಗಳು ಮತ್ತು ನಿಖರ ಬೆಲೆ ಮಾಹಿತಿ ಸೇರಿದಂತೆ ಪಾರದರ್ಶಕ ಮಾಹಿತಿ ನೀಡುವುದರಿಂದ ಗ್ರಾಹಕರಲ್ಲಿ ವಿಶ್ವಾಸ ವೃದ್ಧಿಸುತ್ತದೆ. ಇದು ಸಂಸ್ಥೆಯ ಗೌರವ, ದೃಢತೆ ಮತ್ತು ವ್ಯಾಪಾರ ಬೆಳವಣಿಗೆಗೆ ಸಹಾಯವಾಗುತ್ತದೆ.

## ಇ-ಮಾರ್ಕೆಟಿಂಗ್ ಯೋಜನೆಗೆ ಹಲವು ಮಾರ್ಗಗಳು: ಹೆಚ್ಚು ಪರಿಣಾಮಕಾರಿಯಾಗಿ ತಲುಪಲು ತಂತ್ರಗಳು

### ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳು:

Amazon Fresh, BigBasket, Grofers, ಮತ್ತು ONDC ವೆಬ್ ಸೈಟ್‌ಗಳಲ್ಲಿ ಉತ್ಪನ್ನಗಳನ್ನು ಪಟ್ಟಿ ಮಾಡುವುದರ ಮೂಲಕ ಎಫ್‌ಪಿಒಗಳು ತಕ್ಷಣ ಮಾರುಕಟ್ಟೆ ಪ್ರವೇಶವನ್ನು ಪಡೆಯಬಹುದು. ಈ ಪ್ಲಾಟ್‌ಫಾರ್ಮ್‌ಗಳು ಲಾಜಿಸ್ಟಿಕ್ ಮತ್ತು ಪಾವತಿ ವ್ಯವಸ್ಥೆಗಳನ್ನು ನಿರ್ವಹಿಸುತ್ತವುದರಿಂದ ವ್ಯವಹರಿಸಲು ಸಹಕಾರಿಯಾಗುತ್ತದೆ.

### ಅಗ್ರಿಟೆಕ್ ಮಾರುಕಟ್ಟೆ ತಾಣಗಳು:

AgroStar, DeHaat, ಮತ್ತು Ninjacart ಎಂಬ ತಂತ್ರಜ್ಞಾನ ಆಧಾರಿತ ಕೃಷಿ ಪ್ಲಾಟ್‌ಫಾರ್ಮ್‌ಗಳು B2B ಮತ್ತು B2C ಮಾರುಕಟ್ಟೆಗೆ ಪರಿಣಿತ ಬೆಂಬಲ ಒದಗಿಸುತ್ತವೆ. ಇವು ದೊಡ್ಡಮಟ್ಟದ ಮಾರಾಟ ಹಾಗೂ ಸಂಸ್ಥಾತ್ಮಕ (MNC) ಗ್ರಾಹಕರಿಗೆ ಅತ್ಯುತ್ತಮ ಆಯ್ಕೆಯಾಗಿವೆ.

### ನೇರ ಗ್ರಾಹಕರಿಗೆ ಡೆಲಿವರಿ ಅಪ್ಲಿಕೇಶನ್‌ಗಳು:

ತಾಜಾ ತರಕಾರಿಗಳು, ಹಾಲು ಉತ್ಪನ್ನಗಳು ಮುಂತಾದ ಸ್ಥಳೀಯ ಉತ್ಪನ್ನಗಳಿಗಾಗಿ Dunzo, Swiggy Instamart ಅಥವಾ ಸುಲಭ ಮೊಬೈಲ್ ಆ್ಯಪ್ ಗಳನ್ನು ಬಳಸುವುದು ಹೆಚ್ಚು ಪರಿಣಾಮಕಾರಿ. ಇದು ನೇರವಾಗಿ ಗ್ರಾಹಕರ ಮನೆಬಾಗಿಲಿಗೆ ತಲುಪುವ ಮಾರ್ಗವಾಗಿದೆ.

## ಡಿಜಿಟಲ್ ಪ್ಲಾಟ್ ಫಾರ್ಮ್ ಗಳ ಮೂಲಕ ಆಫ್‌ಲೈನ್ ಮಾರಾಟಕ್ಕೂ ಶಕ್ತಿ:

ಡಿಜಿಟಲ್ ಬಳಕೆ ಹೆಚ್ಚು ಪ್ರಚಲಿತ ಇರುವುದರಿಂದ ಕೇವಲ ಆನ್‌ಲೈನ್ ಮಾರಾಟವೇ ಹೆಚ್ಚಾಗುವುದಿಲ್ಲ, ಅದರ ಜೊತೆಗೆ ಆಫ್‌ಲೈನ್ ವ್ಯಾಪಾರಕ್ಕೂ ಉತ್ತಮ ಬೆಂಬಲ ಒದಗಿಸುತ್ತದೆ. ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯ ಎಫ್‌ಪಿಒಗಳು, Reliance Fresh, Spencer's ಮತ್ತು ಸ್ಥಳೀಯ ಸೂಪರ್‌ಮಾರ್ಕೆಟ್‌ಗಳಲ್ಲಿ ಶೇ.45 ಹೆಚ್ಚು ಯಶಸ್ಸು ಸಾಧಿಸಿರುವುದು ವರದಿಯಾಗಿದೆ.

ಚಿಲ್ಲರೆ ವ್ಯಾಪಾರಿಗಳು ಹೆಚ್ಚಾಗಿ ಡಿಜಿಟಲ್ ಗುರುತನ್ನು ಹೊಂದಿರುವ, ಗ್ರಾಹಕರಿಗೆ ಪರಿಚಿತವಾಗಿರುವ ಹಾಗೂ ಜನಪ್ರಿಯತೆ ಹೊಂದಿರುವ ಪೂರೈಕೆದಾರರನ್ನು ಆಯ್ಕೆಮಾಡುತ್ತಾರೆ. ಇದು ಅವರ ಮಾರುಕಟ್ಟೆ ಬಜೆಟ್ ಕಡಿಮೆ ಮಾಡುತ್ತದೆ ಮತ್ತು ಅವಶ್ಯಕ ದಾಸ್ತಾನು ಗುರಿಯನ್ನು ಶೀಘ್ರದಲ್ಲಿ ತಲುಪಬಹುದು.

ಮತ್ತು, ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಬಳಕೆಯಿಂದ ಎಫ್‌ಪಿಒಗಳು ಕೃಷಿ ಮೇಳಗಳು ಮತ್ತು ಸಾವಯವ ಉತ್ಪನ್ನ ಉತ್ಸವಗಳಲ್ಲಿ ಭಾಗವಹಿಸಿ, ತಮ್ಮ ಉತ್ಪನ್ನಗಳನ್ನು ವೇಗವಾಗಿ ಮಾರಾಟ ಮಾಡಿ, ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಸ್ಥಿತಿಯನ್ನು ಪಡೆಯುತ್ತಿದ್ದಾರೆ.

ಪ್ರಾಯೋಗಿಕ ಉದಾಹರಣೆಗಳು: ಡಿಜಿಟಲ್ ತಂತ್ರಜ್ಞಾನದಿಂದ ಎಫ್‌ಪಿಒಗಳ ಯಶಸ್ಸು

## ಡಿಜಿಟಲ್ ತಂತ್ರಜ್ಞಾನದಿಂದ ಎಫ್‌ಪಿಒಗಳ ಯಶಸ್ಸು:

### ಸಿರಿ ಮಿಲ್ಲೆಟ್ಸ್ ಎಫ್‌ಪಿಒ – ಬಳ್ಳಾರಿ, ಕರ್ನಾಟಕ

ಬಳ್ಳಾರಿ ಜಿಲ್ಲೆಯ ಸಿರಿ ಮಿಲ್ಲೆಟ್ಸ್ ಎಫ್‌ಪಿಒ ತನ್ನ ಜೋಳದ ಪಾಕವಿಧಾನಗಳ ವಿಡಿಯೋಗಳನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಳ್ಳಲು ಪ್ರಾರಂಭಿಸಿತು. ಬೆಳೆ ಕೊಯ್ಲಿನ ಸಮಯದಲ್ಲಿ ರೈತರ ಸಣ್ಣ ರೀಲ್ಸ್ ಮತ್ತು ಮಾಹಿತಿಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟಿಸಿದರು. ಈ ಅಭಿಯಾನವನ್ನು ಗಮನಿಸಿದ ಬೆಂಗಳೂರಿನ ಒಂದು ಸ್ಟಾರ್ಟ್‌ಅಪ್, ಸಿರಿ ಮಿಲ್ಲೆಟ್ಸ್‌ನ ಫಾಕ್ಸ್‌ಟೈಲ್ ಮತ್ತು ಲಿಟಲ್ ಮಿಲ್ಲೆಟ್‌ಗಳನ್ನು ತಮ್ಮ ಸಬ್‌ಸ್ಕ್ರಿಪ್ಷನ್ ಕಿಟ್‌ಗಳಲ್ಲಿ ಸೇರಿಸಲು ಸಾಮೂಹಿಕ ಖರೀದಿ ಒಪ್ಪಂದ ಮಾಡಿಕೊಂಡಿತು.

ಕೇವಲ 10 ರೀಲ್ಸ್ ಮತ್ತು ರೈತ ಉಲ್ಲೇಖಗಳಿಂದ ಆರಂಭವಾದ ಈ ಪ್ರಯತ್ನ, ಇಂದು ನಿರಂತರ ಆರ್ಡರ್‌ಗಳಿರುವ B2B ಸಂಬಂಧವಾಗಿ ಬೆಳೆಯಿತು. ಇದರ ಪರಿಣಾಮವಾಗಿ ರೈತರು ಉತ್ತಮ ಬೆಲೆ ಪಡೆಯುತ್ತಿರುವುದಷ್ಟೇ ಅಲ್ಲದೆ, ತಮ್ಮ ಉತ್ಪನ್ನಗಳ ಮೇಲೂ ವಿಶ್ವಾಸ ಬೆಳೆಸಿಕೊಂಡಿದ್ದಾರೆ.

### ಕೃಷಿ ಉತ್ಕರ್ಷ ಎಫ್‌ಪಿಒ – ಕರ್ನಾಟಕ

ಕೃಷಿ ಉತ್ಕರ್ಷ ಎಫ್‌ಪಿಒ ವಾಟ್ಸಾಪ್ ಬಿಸಿನೆಸ್ ಮತ್ತು ಇನ್‌ಸ್ಟಾಗ್ರಾಂ ಪ್ಲಾಟ್‌ಫಾರ್ಮ್‌ಗಳನ್ನು ಬಳಸಿಕೊಂಡು ತಾಜಾ ತರಕಾರಿ ಮತ್ತು ಸಾವಯವ ಹಣ್ಣುಗಳ ಮಾರುಕಟ್ಟೆ ವಿಸ್ತರಿಸಲು ಆರಂಭಿಸಿತು. ಪ್ರತಿದಿನದ ಬೆಳೆ ಕೊಯ್ಲಿನ ಚಿತ್ರಗಳು, ವಿಶೇಷ ಉತ್ಪನ್ನಗಳು ಇತ್ಯಾದಿ ಸ್ಥಳೀಯ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ವಾಟ್ಸಾಪ್ ಮುಖಾಂತರ ಹಂಚಿಕೊಳ್ಳಲಾಯಿತು. ಇನ್‌ಸ್ಟಾಗ್ರಾಂನಲ್ಲಿ ರೈತರ ಕಥೆಗಳು ಮತ್ತು ಗ್ರಾಹಕರ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ ತಲುಪಲು ಸಾಧ್ಯವಾಯಿತು.ಈ ಸರಳ ಡಿಜಿಟಲ್ ಕೌಶಲ್ಯವು ಹೊಸ ಗ್ರಾಹಕರನ್ನು ಸೆಳೆಯಿತು, ನಗರದ ರಿಟೇಲ್ ಅಂಗಡಿಗಳಿಂದ ಆರ್ಡರ್‌ಗಳು ಬಂದವು, ಮತ್ತು ನವೀನ ಸೂಪರ್ ಮಾರುಕಟ್ಟೆಗಳೊಂದಿಗೆ ಸಹಕಾರ ಒಡಂಬಡಿಕೆಗಳನ್ನು ಮಾಡಿಕೊಂಡರು. ಇದರ ಫಲವಾಗಿ ಸದಸ್ಯ ರೈತರಿಗೆ ಉತ್ತಮ ಬೆಲೆ ದೊರೆಯುತ್ತಿದೆ. ಆನ್‌ಲೈನ್ ಹಾಗೂ ಸ್ಥಳೀಯ ಮಾರುಕಟ್ಟೆಗಳಲ್ಲಿ ಸ್ಪಷ್ಟ ಮಾರಾಟ ಸಾಧ್ಯವಾಗಿದೆ.

ಇ-ಮಾರ್ಕೆಟಿಂಗ್ ಅಂದರೆ ಒಂದು ರಾತ್ರಿಯಲ್ಲಿ ತಂತ್ರಜ್ಞಾನ ಆಧಾರಿತ ದೊಡ್ಡ ವ್ಯವಹಾರ ಆರಂಭಿಸುವ ವಿಷಯವಲ್ಲ. ಇದು ಒಂದು ಸರಳ ಚಿತ್ರಣ, ಒಂದು ಗ್ರಾಹಕರ ಸಂದೇಶ ಅಥವಾ ಒಬ್ಬ ರೈತನ ಕಥೆಯಿಂದ ಆರಂಭವಾಗುತ್ತದೆ. ಸಮಯದೊಂದಿಗೆ ಇದು ಬ್ರಾಂಡ್ ಮೌಲ್ಯವನ್ನು ನಿರ್ಮಿಸುತ್ತದೆ, ಉತ್ತಮ ಬೆಲೆ ಪಡೆಯಲು ನೆರವಾಗುತ್ತದೆ ಮತ್ತು ಬೇಡಿಕೆಯನ್ನು ಹೆಚ್ಚಿಸುತ್ತದೆ. ಇಂದಿನ ಗ್ರಾಹಕರು ನೈಜತೆ ಮತ್ತು ಪತ್ತೆಹಚ್ಚಬಹುದಾದ ಉತ್ಪನ್ನಗಳನ್ನು ಹೆಚ್ಚು ಹುಡುಕುತ್ತಿರುವ ಹಿನ್ನೆಲೆಯಲ್ಲಿ, ಸಣ್ಣ ಮಟ್ಟದ ಡಿಜಿಟಲ್ ಉಪಕರಣ ಬಳಸುವ ಎಫ್‌ಪಿಒಗಳಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕ ಬಲ ದೊರೆಯುತ್ತಿದೆ.

# ನಿಮ್ಮ FPO ಬ್ರ್ಯಾಂಡ್

## ನಿರ್ಮಾಣಕ್ಕಾಗಿ ಐದು ಅಗತ್ಯ ತಿಳಿವಳಿಕೆಗಳು

- ಮೋನಪ್ಪ ನಳ್ಳಂದ, ದಿ ನಡ್ಜ್ ಇನ್ಸ್ಟಿಟ್ಯೂಟ್

1

### ಬ್ರ್ಯಾಂಡಿಂಗ್ ಎಂದರೇನು?

ಬ್ರ್ಯಾಂಡಿಂಗ್ ಎಂದರೆ ನಿಮ್ಮ ವ್ಯವಹಾರ ಅಥವಾ ಸಂಸ್ಥೆಗೆ ಒಂದು ವಿಶಿಷ್ಟ ಗುರುತು(Identity) ನೀಡುವುದು. ಇದು ಗ್ರಾಹಕರ ಮನಸ್ಸಿನಲ್ಲಿ ವಿಶ್ವಾಸ ಮತ್ತು ನೆನಪಿನಲ್ಲಿ ಉಳಿಯುವಂತೆ ಮಾಡುವುದು. ಉದಾಹರಣೆ, ನಾವು ಬಳಸುವ ಪ್ರಸಿದ್ಧ ಬ್ರ್ಯಾಂಡ್ಗಳನ್ನು ನೋಡಿದಾಗ ಅವುಗಳ ಗುಣಮಟ್ಟ ಮತ್ತು ಮೌಲ್ಯಗಳು ತಕ್ಷಣ ನೆನಪಾಗುತ್ತವೆ, ಅದೇ ರೀತಿ ಎಫ್ ಪಿ ಒಗಳಿಗೆ ಬ್ರ್ಯಾಂಡ್ ಎಂದರೆ ರೈತರಿಂದ ಉತ್ಪಾದನೆಯಾದ ಸರಕುಗಳನ್ನು ಗುಣಮಟ್ಟದ ಗುರುತು, ನಂಬಿಕೆಯ ಚಿಹ್ನೆ ಮತ್ತು ಮಾರುಕಟ್ಟೆಯಲ್ಲಿ ವಿಶಿಷ್ಟ ಸ್ಥಾನ ಕಲ್ಪಿಸುವುದು.

2

### ನಿಮ್ಮ FPOಗಳ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಏಕೆ ಮುಖ್ಯ?



**ನಿಮ್ಮ ಉತ್ಪನ್ನಕ್ಕೆ ಬ್ರ್ಯಾಂಡ್ ಮಾಡದಿದ್ದಾಗ**

- ಸಗಟು ವ್ಯಾಪಾರಿಗಳು, B2B ತಯಾರಕರನ್ನು ಆಕರ್ಷಿಸುತ್ತದೆ
- ಸಾಮಾನ್ಯ ಬೆಲೆ ದೊರೆಯುತ್ತದೆ, ಗುಣಮಟ್ಟಕ್ಕೆ ಹೆಚ್ಚುವರಿ ಬೆಲೆ ಸಿಗುವುದಿಲ್ಲ



**ನಿಮ್ಮ ಉತ್ಪನ್ನಕ್ಕೆ ಬ್ರ್ಯಾಂಡ್ ಮಾಡಿದಾಗ**

- ನೇರ ಗ್ರಾಹಕರು, ಚಿಲ್ಲರೆ ವ್ಯಾಪಾರಿಗಳನ್ನು ಆಕರ್ಷಿಸುತ್ತದೆ
- ನಿರ್ದಿಷ್ಟ ಮತ್ತು ವಿಶಿಷ್ಟ ಉತ್ಪನ್ನದ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳನ್ನು ತಿಳಿಸುವುದರ ಮೂಲಕ ಉತ್ತಮ ಬೆಲೆ ಪಡೆಯಿರಿ

3


### ಬ್ರ್ಯಾಂಡ್ ಯಾವುದನ್ನು ಪ್ರತಿನಿಧಿಸಬೇಕು ಎಂದು ತಿಳಿಯುವುದು ಹೇಗೆ?

ನೀವು ಮೊದಲು, ನಿಮ್ಮ ಗ್ರಾಹಕರು ಯಾರು ಮತ್ತು ಅವರು ನಿಮ್ಮ ಉತ್ಪನ್ನವನ್ನು ಏಕೆ ಬಳಸುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುವ ಮೂಲಕ ಪ್ರಾರಂಭಿಸಬೇಕು.

ನಂತರ, ನಿಮ್ಮ ಬ್ರ್ಯಾಂಡ್‌ನ ವಿಶಿಷ್ಟ ಪ್ರಯೋಜನ ಮತ್ತು ಅದನ್ನು ಬೆಂಬಲಿಸುವ ವೈಶಿಷ್ಟ್ಯಗಳನ್ನು ಗುರುತಿಸಬೇಕು. ಗ್ರಾಹಕರು ಇದಕ್ಕೆ ಅನುಕೂಲಕರವಾಗಿ ಪ್ರತಿಕ್ರಿಯಿಸಿದರೆ, ಆಗ ನೀವು ನಿಮ್ಮ ಬ್ರ್ಯಾಂಡ್‌ನೊಂದಿಗೆ ಮುಂದುವರಿಯಬಹುದು.

4

### ಬ್ರ್ಯಾಂಡ್ ಲೋಗೋ ವಿನ್ಯಾಸಗೊಳಿಸುವಾಗ ನೀವು ಏನನ್ನು ಪರಿಗಣಿಸಬೇಕು?




ಈ 3 ಅಂಶಗಳು ಪ್ರಮುಖವಾಗಿರಬೇಕು ಮತ್ತು ಇತರ ಸ್ಪರ್ಧಾತ್ಮಕ ಬ್ರ್ಯಾಂಡ್‌ಗಳಿಗಿಂತ ಭಿನ್ನವಾಗಿರಬೇಕು.

5

### ನಿಮ್ಮ ಬ್ರ್ಯಾಂಡ್ ಲೋಗೋವನ್ನು ಇತರರು ನಕಲು ಮಾಡದಂತೆ ಹೇಗೆ ರಕ್ಷಿಸುವುದು?

ನಿಮ್ಮ ಬ್ರ್ಯಾಂಡ್ ಲೋಗೋ ಈಗಾಗಲೇ ಬೇರೆ ಬ್ರ್ಯಾಂಡ್‌ನಿಂದ ಟ್ರೇಡ್‌ಮಾರ್ಕ್ ಆಗಿಲ್ಲ ಎಂಬುದನ್ನು ಪರಿಶೀಲಿಸಲು ಟ್ರೇಡ್‌ಮಾರ್ಕ್ ವೆಬ್‌ಸೈಟ್‌ಗೆ (https://www.ipindia.gov.in/sitemap.htm) ಭೇಟಿ ನೀಡಿ. ನಿಮ್ಮ ಬ್ರ್ಯಾಂಡ್ ಲೋಗೋ ವಿಶಿಷ್ಟವಾಗಿದ್ದರೆ, ಅದನ್ನು ಟ್ರೇಡ್‌ಮಾರ್ಕ್ ಮಾಡಲು ನೋಂದಾಯಿಸಿ. ವ್ಯಕ್ತಿಗಳು, ಸ್ಟಾರ್ಟ್-ಅಪ್‌ಗಳು ಮತ್ತು ಸಣ್ಣ ಉದ್ಯಮಗಳಿಗೆ ಶುಲ್ಕಗಳು: INR 4,500 (ಆನ್‌ಲೈನ್) / INR 5,000 (ಆಫ್‌ಲೈನ್).

# ರಿವಾರ್ಡ್ ಸಹಯೋಗದೊಂದಿಗೆ ಎಫ್‌ಪಿಒಗಳಿಗೆ ಹೊಸ ಭರವಸೆ, ಹೊಸ ಬೆಳಕು

ಜಲಾನಯನ ಅಭಿವೃದ್ಧಿ ಇಲಾಖೆ

-ರಿವಾರ್ಡ್ ಯೋಜನೆ, ಜಲಾನಯನ ಅಭಿವೃದ್ಧಿ ಇಲಾಖೆ

## ವಿಶ್ವ ಬ್ಯಾಂಕ್ ಸಹಭಾಗಿತ್ವದಲ್ಲಿ ಜಲಾನಯನ ಮಾದರಿ: ಎಫ್‌ಪಿಒಗಳ ಶ್ರೇಣಿಗೆ ಹೊಸದಾರಿ ತೋರಲಾಗಿದೆ

ಕರ್ನಾಟಕದ ಜಲಾನಯನ ಅಭಿವೃದ್ಧಿ ಇಲಾಖೆಯು (WDD), ವಿಶ್ವ ಬ್ಯಾಂಕ್ ಜೊತೆಗೆ ಸಹಯೋಗದೊಂದಿಗೆ ರಿವಾರ್ಡ್ (REWARD) ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ರೈತ ಉತ್ಪಾದಕ ಸಂಸ್ಥೆಗಳ (ಎಫ್. ಪಿ. ಒ) ಅಭಿವೃದ್ಧಿಗೆ ರಾಜ್ಯದ ನೊಡಲ್ ಇಲಾಖೆಯಾಗಿ ಜಲಾನಯನ ಅಭಿವೃದ್ಧಿ ಇಲಾಖೆ ಪ್ರಮುಖ ಪಾತ್ರವಹಿಸಿದೆ.

### REWARD ಯೋಜನೆಯಡಿ ಮೌಲ್ಯವರ್ಧನೆಗೆ ನೆರವು

**ಯೋಜನೆಯ ಮುಖ್ಯ ಉದ್ದೇಶ**

- ವೈಜ್ಞಾನಿಕ ಜಲಾನಯನ ನಿರ್ವಹಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು
- ಹವಾಮಾನ ಸಹಿಷ್ಣತೆಯನ್ನು (Climate Resilience) ಬೆಂಬಲಿಸುವುದು.
- ಕೃಷಿಯ ಮೌಲ್ಯಸರಪಳಿಯ ಅಭಿವೃದ್ಧಿಗೆ ಉತ್ತೇಜಿಸುವುದು.
- ಈ ಯೋಜನೆಯನ್ನು ಆರ್ಥಿಕ ವರ್ಷ 2022-23 ಅನ್ನು ಆಧಾರ ವರ್ಷವಾಗಿ ಪರಿಗಣಿಸಲಾಗಿದೆ.
- ಇದರ ಅಡಿಯಲ್ಲಿ FPOಗಳ ವ್ಯಾಪಾರ ಪ್ರಮಾಣವನ್ನು ಹೆಚ್ಚಿಸುವುದು ಮುಖ್ಯ ಗುರಿ.
- ಆಯ್ಕೆಯಾಗಿರುವ ಎಲ್ಲಾ ಎಫ್ ಪಿ ಒಗೂ ರೂ. 30 ಲಕ್ಷದವರೆಗೆ ನೆರವು ಲಭ್ಯ.
- ಈ ಆರ್ಥಿಕ ನೆರವನ್ನು ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಉದ್ದಿಮೆಗಳನ್ನು ಆರಂಭಿಸಲು ಬಳಸಿಕೊಳ್ಳಬಹುದು








### ಇ.ವೈ (EY) ಸಂಸ್ಥೆಯ ತಾಂತ್ರಿಕ ಸಹಾಯದಿಂದ ವ್ಯವಹಾರ ಬಲವರ್ಧನೆ

REWARD ಯೋಜನೆಯ ಅಡಿಯಲ್ಲಿ, ಜಲಾನಯನ ಅಭಿವೃದ್ಧಿ ಇಲಾಖೆ (WDD) ತಾಂತ್ರಿಕ ಸಹಾಯ ಸಂಸ್ಥೆಯಾಗಿ ಏರ್ನ್ಸ್ಟ್ & ಯಂಗ್ LLP ಸಂಸ್ಥೆಯನ್ನು ನೇಮಿಸಿದೆ. ಈ ಸಂಸ್ಥೆಯು ಆಯ್ಕೆಯಾದ ರೈತ ಉತ್ಪಾದಕ ಸಂಸ್ಥೆಗಳ (ರೈ. ಉ. ಸಂ) ಸಮಗ್ರ ಅಭಿವೃದ್ಧಿಗೆ, ಮಾರುಕಟ್ಟೆ ಸಂಪರ್ಕ, ಸಾಮರ್ಥ್ಯಾಭಿವೃದ್ಧಿ, ವ್ಯವಹಾರ ಯೋಜನೆ ರೂಪಿಸುವುದು ಹಾಗೂ ಅನುಷ್ಠಾನಕ್ಕೆ ತರುವ ಬಗ್ಗೆ ಮುಖ್ಯ ಜವಾಬ್ದಾರಿಯನ್ನು ಹೊಂದಿದೆ.

ತಾಂತ್ರಿಕ ಸಹಾಯ ಸಂಸ್ಥೆಯ ಸಹಾಯದಿಂದ 13 ರೈ. ಉ. ಸಂ ಗಳು ಮಾರುಕಟ್ಟೆ ಸಂಪರ್ಕಸಾಧಿಸಿದ್ದು, ಒಟ್ಟು 225 ವ್ಯವಹಾರಗಳ ಮೂಲಕ 4,584 ಮೆಟ್ರಿಕ್ ಟನ್ ಉತ್ಪನ್ನಗಳನ್ನು ಮಾರಾಟ ಮಾಡಿವೆ. ಇದರ ಮೂಲಕ ₹14.46 ಕೋಟಿಗಳ ವ್ಯಾಪಾರ ಮೌಲ್ಯವನ್ನು ಗಳಿಸಲಾಗಿದೆ. 15 ಎಫ್. ಪಿ. ಒ ಗಳು ತಮ್ಮ ವ್ಯಾಪಾರ ನಿಯತಾಂಕ ಗುರಿಯನ್ನು ಸಾಧಿಸಿದ್ದು, ಇದನ್ನು ಸ್ವತಂತ್ರ ಪರಿಶೀಲನಾ ಸಂಸ್ಥೆ (IVA) ದೃಢೀಕರಿಸಿದೆ.

ಸಾಮರ್ಥ್ಯ ನಿರ್ಮಾಣದ ಅಂಶವಾಗಿ ಒಟ್ಟು 52 ತರಬೇತಿ ಕಾರ್ಯಕ್ರಮಗಳು ನಡೆದಿದ್ದು, ಇದರಿಂದ 1,340 ರೈತ ಉತ್ಪಾದಕ ಸಂಸ್ಥೆಗಳ ಸದಸ್ಯರು ಲಾಭ ಪಡೆದಿದ್ದಾರೆ. ಇದರಲ್ಲಿ ನಾಲ್ಕು ಕೇಂದ್ರ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ (CoEFPO) ಸಹಯೋಗದಿಂದ, ಆರು ಕ್ಲಸ್ಟರ್ ಮಟ್ಟದ ವ್ಯವಹಾರಾಭಿವೃದ್ಧಿ ತರಬೇತಿಗಳು ಹಾಗೂ 42 ರೈತ ಉತ್ಪಾದಕ ಸಂಸ್ಥೆಗಳ ಮಟ್ಟದ ತರಬೇತಿಗಳು ಒಳಗೊಂಡಿವೆ. ತಮ್ಮ ಕಾರ್ಯತಂತ್ರಾತ್ಮಕ ಅಡಿಪಾಯವನ್ನು ಬಲಪಡಿಸುವ ಉದ್ದೇಶದಿಂದ, ಎಲ್ಲಾ ರೈತ ಉತ್ಪಾದಕ ಸಂಸ್ಥೆಗಳು ಕೇಂದ್ರೀಕೃತ ಗುಂಪು ಚರ್ಚೆಗಳಲ್ಲಿ ಭಾಗವಹಿಸಿ ವ್ಯವಹಾರ ಯೋಜನೆಗಳ ರೂಪರೇಷೆಗಳನ್ನು ತಯಾರಿಸಿದ್ದು, ಈ ಪೈಕಿ 12 ಯೋಜನೆಗಳು ಮೊದಲ ಹಂತದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಮಂಜೂರಾಗಿ ಹಣಕಾಸು ನೆರವಿಗೂ ಅರ್ಹವಾಗಿವೆ.

ಆರ್ಥಿಕ ಸ್ಥಿರತೆಯನ್ನು ಸಾಧಿಸುವ ದೃಷ್ಟಿಯಿಂದ, 18 ರೈತ ಉತ್ಪಾದಕರ ಸಂಸ್ಥೆಗಳನ್ನು (FPOs) ವಿವಿಧ ಹಣಕಾಸು ಸಂಸ್ಥೆಗಳೊಂದಿಗೆ ಸಂಪರ್ಕಗೊಳಿಸಲಾಯಿತು. 12 ಸಂಸ್ಥೆಗಳಿಗೆ ಸಾಲ ಸೌಲಭ್ಯ ಕಲ್ಪಿಸುವ ಪ್ರಕ್ರಿಯೆಯನ್ನು ಹಲವು ಸಾಲದಾತ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸುವ ಮೂಲಕ ಪ್ರಾರಂಭಿಸಲಾಯಿತು. ಜೊತೆಗೆ, 7 ಸಂಸ್ಥೆಗಳಲ್ಲಿ ಕಡಿಮೆ CIBIL ಅಂಕಗಳಿರುವ ನಿರ್ದೇಶಕರನ್ನು ಬದಲಾಯಿಸುವ ಮೂಲಕ ಕ್ರೆಡಿಟ್ ಪರಿಗಣನೆಯ ದೋಷಗಳನ್ನು ಸರಿಪಡಿಸಲಾಯಿತು. ಒಟ್ಟು 9 ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆ (NBFC) ಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ಕ್ರೆಡಿಟ್ ಬೆಂಬಲವನ್ನು ಒದಗಿಸಲಾಯಿತು. ಮುಖ್ಯ ಚಟುವಟಿಕೆಗಳ ಜೊತೆಗೆ ಹಲವಾರು ನೆರವಿನ ಕಾರ್ಯಕ್ರಮಗಳು ಜಾರಿಗೆ ಬಂದಿವೆ. ನಾಲ್ಕು ಎಫ್. ಪಿ. ಒ ಗಳಿಗೆ ಕಾನೂನು ಪಾಲನೆಯ ಸಹಾಯ ದೊರೆತಿದ್ದು, ಎರಡು ಎಫ್. ಪಿ. ಒ ಗಳಿಗೆ ಕೃಷಿ ಪರಿಕರಗಳ ಮಾರಾಟ ಪರವಾನಗಿ ಲಭ್ಯವಾಗಿದೆ. 7 ಎಫ್. ಪಿ. ಒ ಗಳಿಗೆ ತಾಂತ್ರಿಕ ಹಾಗೂ ತಂತ್ರಜ್ಞಾನ ಸಹಾಯ ಒದಗಿಸಲಾಗಿದೆ. ಒಟ್ಟು 9 ಎಫ್. ಪಿ. ಒ ಗಳಿಗೆ ಡೇಟಾ ನಿರ್ವಹಣೆ ಮತ್ತು ಡಿಜಿಟಲೀಕರಣ ನೆರವು ಲಭಿಸಿದೆ. ತಾಂತ್ರಿಕ ಸಹಾಯ ಸಂಸ್ಥೆಯು ಒಟ್ಟು 633 ಸಭೆಗಳು ಮತ್ತು ಕ್ಷೇತ್ರ ಭೇಟಿ ಕಾರ್ಯಾಚರಣೆಗಳನ್ನು ನಡೆಸಿದೆ. ಮುಖ್ಯ ಆಕರ್ಷಣೆಯಾಗಿ ಆಯೋಜಿಸಲಾದ ಎಫ್. ಪಿ. ಒ ಮೇಳದಲ್ಲಿ 65 ಖರೀದಿದಾರ-ಮಾರಾಟದಾರರ ಸಭೆಗಳು ನಡೆದಿದ್ದು, 29 ಖರೀದಿದಾರರು ಮತ್ತು 59 ಮಾರಾಟದಾರರು ಪಾಲ್ಗೊಂಡರು. ಈ ಮೇಳದಲ್ಲಿ ರೂ. 57.42 ಕೋಟಿ ಮೌಲ್ಯದ ವ್ಯವಹಾರ ಚರ್ಚೆಗಳು ನಡೆದಿದ್ದು, ಹಲವಾರು ಉದ್ದೇಶಪತ್ರಗಳಿಗೆ ಸಹಿ ಹಾಕಲಾಗಿದೆ. ಈ ಬಹು-ಆಯಾಮಿಕ ಹಸ್ತಕ್ಷೇಪಗಳ ಮೂಲಕ REWARD ಯೋಜನೆ ಜಲಾನಯನ ಪ್ರದೇಶಗಳಲ್ಲಿ ಹವಾಮಾನ ಸಹಿಷ್ಣುತೆಯನ್ನು ನಿರ್ಮಿಸಲು ಮಾತ್ರವಲ್ಲದೆ, ಬಲಿಷ್ಠ ಮತ್ತು ಆತ್ಮನಿರ್ಭರ ಕೃಷಿ ಉದ್ಯಮಗಳಾಗಿ ಎಫ್. ಪಿ. ಒ ಗಳನ್ನು ರೂಪಿಸಲು ಯಶಸ್ವಿಯಾಗಿ ಮುಂದಾಗುತ್ತಿದೆ.

# ‘ರೈತ ಸಿರಿ’

## FPOಗಳ ಏಳಿಗೆಗೆ ಏಕರೂಪದ ಬ್ರ್ಯಾಂಡ್

### ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘದ ಚತುಷ್ಪಥ ಯಾನ

-ಕ.ರಾ.ರೈ.ಉ.ಸಂ.ಸ.ಸಂ.ನಿ, ಬೆಂಗಳೂರು



ಉತ್ಪಾದಕರ ಕಂಪನಿಯಾಗಿ ಎಫ್‌ಪಿಒಗಳು ಸ್ಥಳೀಯ ರೈತ ಸಮುದಾಯದ ಆರ್ಥಿಕ ಹಾಗೂ ಉದ್ಯಮಶೀಲ ಶಕ್ತಿಯನ್ನು ಹೆಚ್ಚಿಸುತ್ತವೆ, ವಿಶೇಷವಾಗಿ ಉತ್ತಮ ಸಂವಹನ ಮತ್ತು ವ್ಯವಹಾರ ಸಂಬಂಧಗಳ ಮೂಲಕ. ಸಣ್ಣ ಮತ್ತು ಅತಿಸಣ್ಣ ರೈತರು ಮಾರುಕಟ್ಟೆಯಲ್ಲಿ ಎದುರಿಸುವ ಸಮಸ್ಯೆಗಳನ್ನು ತಡೆಗಟ್ಟಲು ಎಫ್‌ಪಿಒಗಳನ್ನು ಸ್ಥಾಪಿಸಲಾಗಿದೆ.

ರಾಜ್ಯ ಸರ್ಕಾರವು 2023–24ನೇ ಸಾಲಿನ ರಾಜ್ಯ ಬಜೆಟ್‌ನ ಪರಿಚ್ಛೇದ 41ರಲ್ಲಿ, ರೈತರು ಬೆಳೆಯುವ ಉತ್ಪನ್ನಗಳ ಮಾರಾಟವನ್ನು ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸುಲಭಗೊಳಿಸುವ ಉದ್ದೇಶದಿಂದ **“ನಂದಿನಿ”** ಮಾದರಿಯಂತಹ ಬ್ರಾಂಡಿಂಗ್ ವ್ಯವಸ್ಥೆ ಸ್ಥಾಪಿಸಲು ರೂ.10 ಕೋಟಿ ಅನುದಾನವನ್ನು ಘೋಷಿಸಿತು.

ಈ ಯೋಜನೆಯ ಭಾಗವಾಗಿ, ರಾಜ್ಯದಾದ್ಯಂತದ ರೈತ ಉತ್ಪಾದಕರ ಸಂಸ್ಥೆಗಳನ್ನು ಒಟ್ಟುಗೂಡಿಸಿ, **“ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ ನಿಯಮಿತ, ಬೆಂಗಳೂರು”** ಅನ್ನು 27.02.2024 ರಂದು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದಡಿಯಲ್ಲಿ ನೋಂದಾಯಿಸಲಾಯಿತು.

ಈ ಸಹಕಾರ ಸಂಘದ ಮುಖ್ಯ ಉದ್ದೇಶ ಹಾಗೂ ಗುರಿಯೆಂದರೆ, ರಾಜ್ಯದ ರೈತರು ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಗೊಳ್ಳುವುದರ ಜೊತೆಗೆ, ಅವರು ಉತ್ಪಾದಿಸುವ ಕೃಷಿ ಉತ್ಪನ್ನಗಳ ಉತ್ಪಾದನೆ, ಸಂಗ್ರಹಣೆ, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ವ್ಯವಸ್ಥೆಗಳನ್ನು ಸುಧಾರಿಸುವುದಾಗಿದೆ.

**“ರೈತ ಸಿರಿ”** ಎಂಬ ಹೆಸರಿನ ಬ್ರಾಂಡ್ ಹಾಗೂ **“ರೈತರ ಸಬಲೀಕರಣ ಸಮೃದ್ಧಿ ಜೀವನ”** ಎಂಬ ಟ್ಯಾಗ್‌ಲೈನ್‌ಗೆ ಸರ್ಕಾರದ ಅಧಿಕೃತ ಅನುಮೋದನೆ ಲಭ್ಯವಾಗಿದೆ.

ಕಂಪನಿಗಳ ಅಧಿನಿಯಮದಡಿ ನೋಂದಾಯಿತವಾಗಿರುವ ಎಫ್‌ಪಿಒಗಳು, ಕನಿಷ್ಠ ಒಂದು ಷೇರು ಹೊಂದಿದ್ದರೆ ಸಹಕಾರ ಸಂಘದ ಸದಸ್ಯತ್ವಕ್ಕೆ ಅರ್ಹರಾಗಿರುತ್ತವೆ. ಒಂದು ಷೇರು ಮೊತ್ತ ರೂ.10,000 ಆಗಿದ್ದು, ಇದರ ಜೊತೆಗೆ ರೂ.500 ರಷ್ಟು ಷೇರು ಶುಲ್ಕ ಹಾಗೂ ರೂ.250 ರಷ್ಟು ಪ್ರವೇಶ ಶುಲ್ಕವನ್ನು ಪಾವತಿಸಬೇಕು. ಪ್ರಸ್ತುತ, ಒಟ್ಟು 139 ರೈತ ಉತ್ಪಾದಕರ ಸಂಸ್ಥೆಗಳು ಈ ಷೇರು ಮೊತ್ತವನ್ನು ಪಾವತಿಸಿ ಸಹಕಾರ ಸಂಘದಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿವೆ.

2024–25ರಿಂದ ಆರಂಭವಾಗಿ ಐದು ವರ್ಷಗಳ ಅವಧಿಗೆ ವಿವಿಧ ವಲಯಗಳನ್ನು ಪ್ರತಿನಿಧಿಸುವ ನಿರ್ದೇಶಕರ ಮಂಡಳಿ ಹಾಗೂ ಉಪಾಧ್ಯಕ್ಷರ ನೇಮಕಾತಿಗಾಗಿ ಚುನಾವಣೆಯನ್ನು 24.04.2025ರಂದು ಆಯೋಜಿಸಲಾಗಿತ್ತು. ಇದರ ಜೊತೆಗೆ, ಸಹಕಾರ ಇಲಾಖೆ ಪ್ರಕಟಿಸಿರುವ ಸರ್ಕಾರದ ಆದೇಶದಂತೆ, ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತರು ಸಹಕಾರ ಸಂಘದ ಅಧ್ಯಕ್ಷರಾಗಿ ಪದಗ್ರಹಣ ಮಾಡಿದ್ದಾರೆ.



ಮೊದಲ ನಿರ್ದೇಶಕರ ಮಂಡಳಿಯ ಸಭೆಯನ್ನು 24.04.2025ರಂದು ನಡೆಸಲಾಯಿತು, ಈ ಸಂದರ್ಭದಲ್ಲಿ ಗ್ರಾಹಕರನ್ನು ಆಕರ್ಷಿಸಲು ಪ್ರಾಥಮಿಕ ಹಂತದಲ್ಲಿ ಅತ್ಯುನ್ನತ ಗುಣಮಟ್ಟದ ಆಯ್ದ ಉತ್ಪನ್ನಗಳನ್ನು ಬ್ರಾಂಡ್ ಮಾಡಿ ಮಾರುಕಟ್ಟೆಗಿಳಿಸಲು ನಿರ್ಧರಿಸಲಾಯಿತು.

ವಿವಿಧ ಜಿಲ್ಲೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಎಫ್‌ಪಿಒಗಳನ್ನು ಗುರುತಿಸಿ, ಸಹಕಾರ ಸಂಘದ ಮೂಲಕ ಅವುಗಳಿಗೆ ಉನ್ನತ ಮಟ್ಟದ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಲು ತೀರ್ಮಾನಿಸಲಾಗಿದೆ. ಜೊತೆಗೆ, ಈ ಎಫ್‌ಪಿಒಗಳ ಉತ್ಪನ್ನಗಳನ್ನು ಸಂಘದ ಬ್ರಾಂಡ್‌ನಲ್ಲಿ ಮಾರಾಟ ಮಾಡುವ ಅಥವಾ ಯಶಸ್ವಿ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡು ಅಥವಾ ಕೇಂದ್ರ ಮಟ್ಟದಲ್ಲಿ ಉತ್ಪನ್ನವನ್ನು ಸಂಗ್ರಹಿಸಿ ಲೇಬಲ್ ಮಾಡಿ ಫ್ರಾಂಚೈಸಿಂಗ್ ರೂಪದಲ್ಲಿ ಮಾರಾಟ ಮಾಡುವ ಯೋಚನೆಯೂ ಇದೆ. ಈ ಪ್ರಕ್ರಿಯೆಯು ಪ್ರಾರಂಭಿಕ ಹಂತದಲ್ಲಿರುವ ಕಾರಣ, ವಿವಿಧ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳ ಬಳಿ ಲಭ್ಯವಿರುವ ಈಗಿನ ಮೂಲ-ಸೌಕರ್ಯಗಳನ್ನು ಉಪಯೋಗಿಸಿಕೊಳ್ಳಬೇಕೆಂದು ತೀರ್ಮಾನಿಸಲಾಗಿದೆ.

# ಗುಲ್ಬರ್ಗಾ ತೊಗರಿಗೆ 'ಭೀಮ' ಬಲ

-ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ದ್ವಿ.ಧಾ.ಅ.ಮಂ.ನಿ, ಕಲಬುರಗಿ




## ಗುಣಮಟ್ಟದ ಗುಲ್ಬರ್ಗಾ ತೊಗರಿಯ ನೂತನ ಅಧ್ಯಯ

ಕಲಬುರಗಿ ಜಿಲ್ಲೆಯಲ್ಲಿರುವ ದ್ವಿದಳ ಧಾನ್ಯಗಳನ್ನು ಬೆಳೆಸುವ ರೈತರಿಂದ ಉತ್ಪಾದನೆಯಾಗುವ ಉತ್ತಮ ಗುಣಮಟ್ಟದ ತೊಗರಿಯನ್ನು ಖಾತ್ರಿಪಡಿಸುವ ಉದ್ದೇಶದಿಂದ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ ಕಲಬುರಗಿ ಸಂಸ್ಥೆಯು ಭೌಗೋಳಿಕ ಸೂಚಕ ಪಟ್ಟಿ (GI) ಗೊಂಡಿರುವ "ಗುಲ್ಬರ್ಗ ತೊಗರಿ ಬೇಳೆ"ಯನ್ನು "ಭೀಮಾ ಪಲ್ಸ್" ಎಂಬ ಬ್ರಾಂಡ್ ಹೆಸರಿನಲ್ಲಿ ವಾಣಿಜ್ಯೀಕರಿಸಿದೆ. ಈ ಭೀಮಾ ತೊಗರಿ ಬೇಳೆಯನ್ನು 2023ರ ಆಗಸ್ಟ್‌ನಲ್ಲಿ ಕರ್ನಾಟಕ ರಾಜ್ಯದ ಗೌರವಾನ್ವಿತ ಕೃಷಿ ಸಚಿವರು ಅಧಿಕೃತವಾಗಿ ಪ್ರಾರಂಭಿಸಿದರು.



## ಪ್ಯಾಕೇಜಿಂಗ್ ನಿಂದ ಪ್ರಚಾರದವರೆಗೆ: 'ಭೀಮಾ ಪಲ್ಸ್' ನಡೆದು ಬಂದ ದಾರಿ

ಭೀಮಾ ಬ್ರಾಂಡ್‌ನ GI ತೊಗರಿ ಬೇಳೆಯನ್ನು ಆನ್‌ಲೈನ್ ಮತ್ತು ಆಫ್‌ಲೈನ್ ಚಾನೆಲ್‌ಗಳ ಮೂಲಕ ಮಾರಾಟ ಮಾಡಲಾಗುತ್ತಿದೆ. ಅಧಿಕೃತ ಬಳಕೆದಾರರಿಂದ ಖರೀದಿ ಸಮಯದಲ್ಲಿ FSSAI ಮಾನದಂಡಗಳನ್ನು ಅನುಸರಿಸುವುದು ಅಥವಾ ಮೀರುವುದು ಸೇರಿದಂತೆ ಉತ್ಪನ್ನದ ಗುಣಮಟ್ಟವನ್ನು ಖಚಿತಪಡಿಸಲಾಗುತ್ತದೆ. ಗುಣಮಟ್ಟದ ವಿಶ್ಲೇಷಣೆಯನ್ನು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ತಜ್ಞರು ನಿಭಾಯಿಸುತ್ತಿದ್ದಾರೆ. ಈ ತೊಗರಿಯಲ್ಲಿ ಹೆಚ್ಚಿನ ಪೋಷಕಾಂಶಗಳು ಅಂಶವಿರುವುದರಿಂದ, ಪಾಲಿಶ್ ಮಾಡದ ತೊಗರಿ ಬೇಳೆಯನ್ನು "ಭೀಮಾ ಪಲ್ಸ್" ಎಂಬ ಬ್ರಾಂಡ್‌ನಡಿ ಗ್ರಾಹಕರಿಗೆ ಒದಗಿಸಲಾಗುತ್ತಿದೆ. ಈ ಪ್ರದೇಶದಲ್ಲಿ ಉತ್ಪಾದಿಸುವ ಎಲ್ಲಾ ದ್ವಿದಳ ಧಾನ್ಯಗಳನ್ನು ಸಂಸ್ಕರಿಸುವ ಉದ್ದೇಶದಿಂದ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ ಕಲಬುರ್ಗಿ ಸಂಸ್ಥೆಯು ತನ್ನದೇ ಆದ ಅತ್ಯಾಧುನಿಕ ಹಾಗೂ ಉನ್ನತ ಸಾಮರ್ಥ್ಯದ ಸಂಸ್ಕರಣಾ ಘಟಕವನ್ನು ಕಲಬುರ್ಗಿಯಲ್ಲಿ ಸ್ಥಾಪಿಸುತ್ತಿದೆ. ಉತ್ಪನ್ನದ ಮೂಲ ಮತ್ತು ಗುಣಮಟ್ಟದ ದೃಢೀಕರಣದ ಕುರಿತು ಗ್ರಾಹಕರಿಗೆ ನಂಬಿಕೆ ನೀಡಲು, ಗುಣಮಟ್ಟದ ಬೇಳೆಗೆ ಟ್ರೆಸಬಿಲಿಟಿ ವ್ಯವಸ್ಥೆಗಳನ್ನು ಜಾರಿಗೆ ತರಲಾಗುತ್ತಿದೆ. ಮುಂಬರುವ ದಿನಗಳಲ್ಲಿ ತಿನ್ನಲು ಸಿದ್ಧವಾದ (Ready-to-Eat) ಉತ್ಪನ್ನಗಳು ಮತ್ತು ತೊಗರಿ ಬೇಳೆಯಿಂದ ತಯಾರಿಸಲಾದ ಸಂಸ್ಕರಿತ ಆಹಾರ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಲು ಯೋಜನೆ ರೂಪಿಸಲಾಗಿದೆ. "ಭೀಮಾ ಪಲ್ಸ್" ಬ್ರ್ಯಾಂಡಿನ ತೊಗರಿ ಬೇಳೆಯ ಮಾರಾಟವನ್ನು ಉತ್ತೇಜಿಸಲು ಸಂಸ್ಥೆಯು ತನ್ನದೇ ಆದ ವೆಬ್‌ಸೈಟ್ ಅಭಿವೃದ್ಧಿಪಡಿಸುತ್ತಿದ್ದು, ಸಾಮಾಜಿಕ ಮಾಧ್ಯಮವಾದ ಇನ್‌ಸ್ಟಾಗ್ರಾಂ ಮತ್ತು ಫೇಸ್ಬುಕ್ ಬಳಕೆ ಮಾಡಲಾಗುತ್ತಿದೆ. ಜೊತೆಗೆ ATL (Above the Line), BTL (Below the Line), ಮತ್ತು TTL (Through the Line) ಎಂಬ ವಿವಿಧ ಮಾರುಕಟ್ಟೆ ಪ್ರಚಾರ ಚಟುವಟಿಕೆಗಳನ್ನು ಸಹ ಕಾರ್ಯಗತಗೊಳಿಸುತ್ತಿದೆ. ಭೀಮಾ ಪಲ್ಸ್ GI ಗುಲ್ಬರ್ಗಾ ತೊಗರಿ ಬೇಳೆಯನ್ನು ಉತ್ತಮ ಗುಣಮಟ್ಟದ ಲ್ಯಾಮಿನೇಟೆಡ್ ಪೌಚ್‌ಗಳಲ್ಲಿ ಪ್ಯಾಕ್ ಮಾಡಲಾಗುತ್ತಿದೆ. ಇದಕ್ಕೆ ಅನ್ವಯಿಸುವ ನಿಯಮಗಳ ಅನುಸಾರ ಕಡ್ಡಾಯವಾಗಿ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಪೌಚ್ ಒಳಗೊಂಡಿರುತ್ತದೆ. ಪ್ರಸ್ತುತ ಗ್ರಾಹಕರಿಗೆ ಎರಡು ಉತ್ಪನ್ನ ರೂಪಾಂತರಗಳನ್ನು ನೀಡಲಾಗುತ್ತಿದೆ. ವಾಣಿಜ್ಯ ರೂಪಾಂತರ 'ಸ್ಪೆಷಲ್' ಎಂಬ ಮತ್ತು ಘಟಕ ರೂಪಾಂತರವು "ಪ್ರೀಮಿಯಂ" ಹೆಸರಿನೊಂದಿಗೆ 500 ಗ್ರಾಂ, 1 ಕೆಜಿ, 5 ಕೆಜಿ ಮತ್ತು 30 ಕೆಜಿ ಪ್ಯಾಕೇಜ್‌ಗಳಲ್ಲಿ ಲಭ್ಯವಿರುತ್ತವೆ.




## ತೊಗರಿಯ ಮಾನ್ಯತೆಗೆ ಮಾರ್ಗದರ್ಶಕ ಸಂಸ್ಥೆ: KSPAML ನ ಸಾಧನೆಯ ಪಥ

ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ ಕಲಬುರಗಿ ಸಂಸ್ಥೆಯನ್ನು (KSPAML), ಕರ್ನಾಟಕ ಸರ್ಕಾರವು 2002ರಲ್ಲಿ ರಾಜ್ಯದಲ್ಲಿ ಬೆಳೆಯುವ ದ್ವಿದಳ ಧಾನ್ಯಗಳ ಸಮಗ್ರ ಅಭಿವೃದ್ಧಿಗಾಗಿ ಸ್ಥಾಪಿಸಿತು. ಕಲಬುರಗಿಯನ್ನು ಕರ್ನಾಟಕದ 'ತೊಗರಿ ಕಣಜ' ಎಂದು ಕರೆಯಲಾಗುತ್ತಿದ್ದು, ಈ ಭಾಗದ ವಿಶಿಷ್ಟವಾದ ಮಣ್ಣು ಮತ್ತು ಹವಮಾನ ಗುಣಲಕ್ಷಣಗಳಿಂದಾಗಿ ಇಲ್ಲಿ ಬೆಳೆದ ತೊಗರಿಯು ಅತ್ಯುತ್ತಮ ಗುಣಮಟ್ಟದ್ದಾಗಿದೆ. ಗುಲಬರ್ಗಾ ತೊಗರಿ ಬೇಳೆಗೆ, ಕೃಷಿ ವಿಶ್ವವಿದ್ಯಾಲಯ ರಾಯಚೂರು ಹಾಗೂ ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ ಕಲಬುರಗಿ ಜೊತೆಗೂಡಿ ICRISAT ಹೈದ್ರಾಬಾದ ಸಂಸ್ಥೆಯ ಸತತ ಸಹಾಯದಿಂದ ದಿನಾಂಕ:26-09-2017ರಂದು, ಭೌಗೋಳಿಕ ಪ್ರಮಾಣ (GI) ಪತ್ರ ಸಂಖ್ಯೆ 593 ದೊರೆತಿದೆ. ಕಲಬುರಗಿ, ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತೊಗರಿಯನ್ನು ವ್ಯಾಪಕವಾಗಿ ಬೆಳೆಯಲಾಗುತ್ತದೆ. ಗುಲಬರ್ಗಾ ತೊಗರಿ ಬೇಳೆ ಒಳ್ಳೆಯ ಸುವಾಸನೆ ಹಾಗೂ ರುಚಿಯನ್ನು ಹೊಂದಿದೆ, ಬೇಯಿಸಿದ ಬೇಳೆ ಬೇಗ ಹಾಳಾಗುವುದಿಲ್ಲ. ಈ ಜಿಲ್ಲೆಯಲ್ಲಿನ ಮಣ್ಣು ಹೆಚ್ಚಿನ ಪ್ರಮಾಣದ ಕ್ಯಾಲ್ಸಿಯಂ ಹಾಗೂ ಪೊಟ್ಯಾಷಿಯಂನಿಂದ ಕೂಡಿದ್ದು, ಅತ್ಯುತ್ತಮ ತೊಗರಿಗೆ ಪ್ರಮುಖ ಕಾರಣವಾಗಿದ್ದು, ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿದೆ. ಈ ಭಾಗದಲ್ಲಿ ಬೆಳೆದ ತೊಗರಿಗೆ ಹೆಚ್ಚು ಬೇಡಿಕೆಯಿದೆ ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ತೊಗರಿಯನ್ನು ಗುರುತ್ತಿಸಲಾಗುತ್ತಿದೆ. ಭೌಗೋಳಿಕ ಸೂಚ್ಯಂಕದ ಅಡಿಯಲ್ಲಿ 1301 ರೈತರು, 15 ರೈತ ಉತ್ಪಾದಕ ಸಂಸ್ಥೆಗಳು ಹಾಗೂ 8 ದಾಲ್‌ಮಿಲ್‌ಗಳು ನೋಂದಣಿಯಾಗಿವೆ. 4 ದಾಲ್‌ಮಿಲ್‌ಗಳ ನೋಂದಣಿಗಾಗಿ ದಾಖಲಾತಿಗಳನ್ನು ಸಲ್ಲಿಸಲಾಗಿದೆ.




bhimapulseshelp@gmail.com | www.bhimapulses.com | +91 8277708188

# ಸಾಲದಿಂದ ಸ್ವಾವಲಂಭನೆಗೆ: ಬುಡಕಟ್ಟು ರೈತ ಉತ್ಪಾದಕ ಕಂಪನಿಗಳಿಂದ ಆದಿವಾಸಿ ರೈತರಿಗೆ ಭರವಸೆಯ ಹಾದಿ

-ಡಾ. ಪ್ರಸನ್ನ ಹೆಚ್. ಎಸ್ ಮತ್ತು ಶಶಾಂಕ್ ಗೌಡ, ರೈ.ಉ.ಸಂ.ಉ.ಕೇಂದ್ರ

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ವತಿಯಿಂದ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಹಯೋಗದಲ್ಲಿ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ನಾಲ್ಕು ಬುಡಕಟ್ಟು ರೈತ ಉತ್ಪಾದಕರ ಕಂಪನಿಗಳನ್ನು ಸ್ಥಾಪಿಸಲಾಗಿದೆ. ಮೂಲತಃ ಅರಣ್ಯವಾಸಿಗಳಾದ ಆದಿವಾಸಿ ಜನರನ್ನು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಿಂದ ಸ್ಥಳಾಂತರಿಸಿ ನಾಗಪುರ, ಬಸವನಗಿರಿ, ಶೆಟ್ಟಹಳ್ಳಿ, ಹೆಬ್ಬಾಳ ಮತ್ತು ಮಾಸ್ತಿಗುಡಿಯಲ್ಲಿ 2.5 ಯಿಂದ 5 ಎಕರೆವರೆಗೆ ಭೂಮಿಯನ್ನು ನೀಡಿ ಮತ್ತೆ ಕಾಡಿನ ಮೇಲೆ ಅವಲಂಭಿತರಾಗದೇ ಕೃಷಿಯನ್ನು ಮಾಡಿ ತಮ್ಮ ಜೀವನವನ್ನು ನಡೆಸಲು ಪ್ರೇರೇಪಿಸಲಾಯಿತು. ಕಾಡನ್ನೇ ನಂಬಿ ಬದುಕುವ ಜನರಿಗೆ ಇದು ಕಷ್ಟವಾಯಿತಾದರೂ, ಜನರು ಕೃಷಿಯನ್ನು ನಂಬಿ ಬದುಕಲು ಶುರು ಮಾಡಿದರು.

ಆದಿವಾಸಿ ರೈತ ಉತ್ಪಾದಕ ಕುಟುಂಬಗಳಿಗೆ, ಪ್ರತಿ ವರ್ಷ ಕೃಷಿ ಪ್ರಾರಂಭಿಸಲು ಬೇಕಾದ ಮೂಲ ಬಂಡವಾಳಕ್ಕೆ ಬುಡಕಟ್ಟು ರೈತರು ಪರದಾಡುವಾಗ ಅಲ್ಲಿನ ಸುತ್ತಮುತ್ತಲಿನ ಬಂಡವಾಳಶಾಹಿಗಳು ಸಹಾಯಹಸ್ತವಾಗಿ ಕಾಣಿಸಿದರು. ಸಾಲದ ರೂಪದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಸಂಕಷ್ಟದ ಸಮಯದಲ್ಲಿ ಧನ ಸಹಾಯ ಹೀಗೆ ಅನೇಕ ರೂಪದಲ್ಲಿ ಜನರಿಗೆ ಸ್ಪಂದಿಸಿದರು. ಅವರ ಬೆಳೆ ಬಂದ ಮೇಲೆ ಅಸಲಿನ ಜೊತೆ ಸ್ವಲ್ಪ ಬಡ್ಡಿ ಸೇರಿಸಿ ಸಾಲ ಹಿಂಪಡೆಯುತ್ತಿದ್ದರು. ಆರಂಭದಲ್ಲಿ ಎಲ್ಲವೂ ಸರಿಯಾಗಿಯೇ ನಡೆಯುತ್ತಿತ್ತು, ಆದರೆ ಕ್ರಮೇಣ ರೈತರು ಪಡೆಯುವ ಸಾಲದ ಮೊತ್ತ ಹೆಚ್ಚಾಯಿತು ಮತ್ತು ಬಂಡವಾಳಸಾಹಿಗಳು ಮುಗ್ಧ ಜನರನ್ನು ಶೋಷಣೆ ರೂಪದಲ್ಲಿ ಹೆಚ್ಚಿನ ಸಾಲವನ್ನು ನೀಡಿ, ಹೆಚ್ಚಿನ ಬಡ್ಡಿಯನ್ನು ಸೇರಿಸಿ ಬಂದ ಬೆಳೆಯನ್ನು ತಾವೇ ರೈತರ ಜಮೀನಿನಿಂದ ಕಟಾವು ಮಾಡಿ ಕಡಿಮೆ ಬೆಲೆಗೆ ಬೆಳೆಯನ್ನು ಲೆಕ್ಕ ಹಾಕಿ ಸಾಲ ವಸೂಲಿ ರೂಪದಲ್ಲಿ ಹಣವನ್ನು ಜಮೆ ಮಾಡಿಕೊಂಡು ಉಳಿದ ಅಲ್ಪ-ಸ್ವಲ್ಪ ಹಣವನ್ನು ಬುಡಕಟ್ಟು ರೈತರಿಗೆ ನೀಡುತ್ತಾ ಬಂದರು. ಅನೇಕ ಮುಗ್ಧ ಬುಡಕಟ್ಟು ರೈತರು ಈಗಲು ಸಹ ಈ ಶೋಷಣೆಗೆ ಬಲಿಯಾಗುವುದನ್ನು ಗಮನಿಸಬಹುದಾಗಿದೆ. ಇದನ್ನು ಗಮನಿಸಿದ ರಾಜ್ಯ ಸರ್ಕಾರವು ಈ ರೀತಿಯ ಶೋಷಣೆಯನ್ನು ತಡೆಯಲು ಮತ್ತು ಅನೇಕ ಯೋಜನೆಗಳ ಮೂಲಕ ಕೃಷಿಯಲ್ಲಿ ಆಸಕ್ತಿ ಹೆಚ್ಚಿಸಲು ತೆಗೆದುಕೊತ್ತಿರುವ ಸತತ ಕ್ರಮಗಳ



ಫಲವಾಗಿ ಬುಡಕಟ್ಟು ರೈತ ಉತ್ಪಾದಕರ ಕಂಪನಿಗಳನ್ನು ಪ್ರಾರಂಭಿಸಿತು. ಆರಂಭದಲ್ಲಿ ಬುಡಕಟ್ಟು ರೈತರಿಗೆ ಸಾಲವನ್ನು ಮಾಡದಂತೆ ಕೇಳಿಕಂಡರೂ, ರೈತರು ಮತ್ತೆ ಬಂಡವಾಶಾಹಿಗಳತ್ತ ಮುಖ ಮಾಡುವುದನ್ನು ಗಮನಿಸಿ ಆ ವ್ಯವಸ್ಥೆಯನ್ನು ಬುಡಕಟ್ಟು ರೈತ ಉತ್ಪಾದಕ ಕಂಪನಿಗಳ ಸ್ಥಾಪನೆಯ ಮುಖಾಂತರ ಮಾಡಿಕೊಡಲು ತೀರ್ಮಾನಿಸಲಾಯಿತು. ಇದರ ಫಲವಾಗಿ ಬಿರ್ಸಾಮುಂಡಾ ಹಾಗೂ ಮಾಸ್ತಿಗುಡಿ ಬುಡಕಟ್ಟು ರೈತ ಉತ್ಪಾದಕ ಕಂಪನಿಗಳ ಮುಖಾಂತರ ಸಾಲದ ರೂಪದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಮತ್ತಿತರ ಪರಿಕರಗಳನ್ನು ವಿತರಿಸಿ ಬುಡಕಟ್ಟು ರೈತರು ಬೆಳೆಯನ್ನು ಕಟಾವು ಮಾಡಿ



ಮಾರಿದ ನಂತರ ಈ ಹಣವನ್ನು ವಾಪಸ್ಸು ಕಟ್ಟಿಕೊಡಲು ವ್ಯವಸ್ಥೆಯನ್ನು ತರಲಾಯಿತು. ಇದರಿಂದ ಬುಡಕಟ್ಟು ರೈತರಿಗೆ ಬಂಡವಾಳಶಾಹಿಗಳು ಹಾಕುವ ಹೆಚ್ಚಿನ ಬಡ್ಡಿ, ಬೆಲೆಯಲ್ಲಿ ಮೋಸ, ತೂಕದಲ್ಲಿ ಮೋಸ ಹೀಗೆ ವಂಚನೆಗೆ ಒಳಗಾಗುವುದನ್ನು ತಪ್ಪಿಸುವ ಕಾರ್ಯ ಕಳೆದೆರಡು ವರ್ಷಗಳಿಂದ ನಡೆಯುತ್ತಿದೆ. ಕಳೆದ ವರ್ಷ ಮಾಸ್ತಿಗುಡಿಯಲ್ಲಿ ಪ್ರಾರಂಭವಾಗಿ 15 ಬುಡಕಟ್ಟು ರೈತರ 50 ಎಕರೆಗೆ ಸಾಲದ ರೂಪದಲ್ಲಿ ಬಿತ್ತನೆಬೀಜ ಮತ್ತು ರಸಗೊಬ್ಬರ ವಿತರಣೆ ಮಾಡಲಾಯಿತು. ಇದರಿಂದ ಅನೇಕ ರೈತರು ಮೊದಲ ಬಾರಿಗೆ ಕೃಷಿ ಮಾಡಿ ಹೆಚ್ಚಿನ ಲಾಭ ಪಡೆದುಕೊಂಡರು ಮತ್ತು ಅನೇಕರು ಹೊರಗಿನ ಬಿತ್ತನೆ ರಸಗೊಬ್ಬರದ ಅಂಗಡಿಗಳಿಗಿಂತ ಇಲ್ಲಿ ವ್ಯವಹಾರ ಮಾಡುವುದರಿಂದ ಅಧಿಕ ಬಡ್ಡಿಯನ್ನು ಕಟ್ಟುವುದರಿಂದ ತಪ್ಪಿಸಿಕೊಂಡು ಬೆಳೆಗೆ ಹೆಚ್ಚಿನ ಬೆಲೆ ಪಡೆದು ಲಾಭ ಗಳಿಸಿದರು. ಇದರಿಂದ ಇನ್ನಷ್ಟು ಬುಡಕಟ್ಟು ರೈತರು ಉತ್ತೇಜಿತಗೊಂಡು ಅವರು ಸಹ ಕಂಪನಿಯೊಟ್ಟಿಗೆ ವ್ಯವಹಾರ ಮಾಡುವ ಉತ್ಸಾಹ ತೋರಿದರು. ಆದ್ದರಿಂದ ಈ ವರ್ಷ ಮಾಸ್ತಿಗುಡಿ ಬುಡಕಟ್ಟು ರೈತ ಉತ್ಪಾದಕ ಕಂಪನಿಯಿಂದ 44 ಜನ ಬುಡಕಟ್ಟು ರೈತರಿಗೆ ಗಂಗಾಕಾವೇರಿ ಹೈಬ್ರಿಡ್ ಜೋಳದ ಬೀಜಗಳು, ಯೂರಿಯಾ, 20.20.0.13, ಡಿ ಎ ಪಿ,, ಎಮ್ ಓ ಪಿ ರಸಗೊಬ್ಬರಗಳು, ಕಳೆನಾಶಕ ಹಾಗೂ ಪೀಡೆನಾಶಕಗಳನ್ನು ಸಮಯಕ್ಕನುಸಾರವಾಗಿ ಬುಡಕಟ್ಟು ರೈತರಿಗೆ ಸಾಲದ ರೂಪದಲ್ಲಿ (ರೂ. 9,46,340 ವೆಚ್ಚದ ಪರಿಕರಗಳು) ವಿತರಿಸಿ ಸುಮಾರು 276 ಎಕರೆ ಪ್ರದೇಶದಲ್ಲಿ ಜೋಳವನ್ನು ಬೆಳೆದು ಬುಡಕಟ್ಟು ರೈತರು ಲಾಭ ಗಳಿಸಲು ಮೂಲಭೂತವಾಗಿ ಹೊರಗಿನ ಬಂಡವಾಳಶಾಹಿಗಳಿಂದ ಶೋಷಿತರಾಗುವುದನ್ನು ತಪ್ಪಿಸಲಾಗಿದೆ ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತಿದೆ ಮತ್ತು ಬುಡಕಟ್ಟು ಜನರ ಜೀವನ ಮಟ್ಟ ಸುಧಾರಣೆಗೆ ನಮ್ಮ ಸಂಸ್ಥೆಯು ಅನೇಕ ಯೋಜನೆಗಳನ್ನು ರೂಪಿಸಿದ್ದು ಅವರ ಸೇವೆಗೆ ಸದಾ ಸಿದ್ಧರಾಗಿ ಕೆಲಸ ಮಾಡುವಲ್ಲಿ ಹೆಚ್ಚಿನ ಆತ್ಮತೃಪ್ತಿಯನ್ನು ನಾವುಗಳು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ತಿಳಿಸಲು ಇಚ್ಛಿಸುತ್ತೇವೆ.

## ಡಿಜಿಟಲ್ ಗ್ರೀನ್ ಟ್ರಸ್ಟ್

# ಮಾಹಿತಿ ಸಂಗ್ರಹಣೆ ಮತ್ತು ದಾಖಲಾತಿ ನಿರ್ವಹಣೆಗೆ ಡಿಜಿಟಲೀಕರಣದ ಮದ್ದು




### ಎಫ್‌ಪಿಒ ನಾಯಕತ್ವಕ್ಕೆ ಡಿಜಿಟಲ್ ಬಲ: ಸರಳ ಸಾಧನೆಗೆ ಸ್ಮಾರ್ಟ್ ಮಾರ್ಗ

ಯಾವುದೇ ವ್ಯವಹಾರದ ಯಶಸ್ಸು, ವಿಶೇಷವಾಗಿ ಸಂಸ್ಥೆಯನ್ನು ಮುನ್ನಡಿಸುವ ನಾಯಕರು ಡೇಟಾವನ್ನು ಸರಿಯಾಗಿ ಬಳಸುವ ಸಾಮರ್ಥ್ಯದ ಮೇಲೆ ಯಶಸ್ಸು ಅವಲಂಬಿತವಾಗಿದೆ. ಆಯ್ದ ಉತ್ಪಾದಕರ ಸಂಸ್ಥೆಗಳಿಗೂ ಇದು ಅನ್ವಯಿಸುತ್ತದೆ. ಬಹುತೇಕ ಎಫ್ ಪಿ ಒ ನಾಯಕರು ಸಣ್ಣ ಮತ್ತು ಅತಿಸಣ್ಣ ರೈತರಾಗಿರುವುದರಿಂದ ವ್ಯವಹಾರದ ಅನುಭವ ಕಡಿಮೆ ಇರುತ್ತದೆ. ಆದ್ದರಿಂದ, ಡೇಟಾವನ್ನು ಬಳಸಿಕೊಂಡು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಎಫ್ ಪಿ ಒ ಸಿಬ್ಬಂದಿಗಳಿಗೆ ಸರಳ ವ್ಯವಸ್ಥೆ ರೂಪಿಸಬೇಕಾಗುತ್ತದೆ.

ಈ ವ್ಯವಸ್ಥೆಯನ್ನು ಸರಿಯಾದ ಡಿಜಿಟಲ್ ಸಾಧನಗಳನ್ನು ಉಪಯೋಗಿಸಿ ರೂಪಿಸಬಹುದು. ಇದು ಎಫ್ ಪಿಒ ನಾಯಕರಿಗೆ ತಮ್ಮ ಯೋಜನೆಗಳನ್ನು ರೂಪಿಸಲು ಮತ್ತು ಮುಖ್ಯ ನಿರ್ಧಾರಗಳನ್ನು ಡೇಟಾ ಆಧಾರದ ಮೇಲೆ ತೆಗೆದುಕೊಳ್ಳಲು ಸಹಾಯಮಾಡುತ್ತವೆ. ಹೊಸ ಉದ್ಯಮವನ್ನು ಆರಂಭಿಸುವಾಗ ಉದಾಹರಣೆಗೆ, ಕೃಷಿ ಪರಿಕರಗಳ ಪೂರೈಕೆ, ಉತ್ಪನ್ನ ಮಾರಾಟ ಅಥವಾ ಸೇವೆಗಳಾಗಿರಲಿ ಹಲವು ಪ್ರಶ್ನೆಗಳು ಬರುತ್ತವೆ: ಏನು ಆರಂಭಿಸಬೇಕು? ಯಾವ ಉತ್ಪನ್ನಗಳೊಂದಿಗೆ ಪ್ರಾರಂಭಿಸಬೇಕು? ಎಷ್ಟು ಉತ್ಪನ್ನಗಳೊಂದಿಗೆ ಪ್ರಾರಂಭಿಸಬೇಕು? ಗ್ರಾಹಕರು ಯಾರು? ರೈತರಿಗೆ ಏನು ಬೇಕು? ರೈತರ ಬಳಿ ಏನಿದೆ? ಪೂರೈಕೆದಾರರು ಅಥವಾ ಖರೀದಿದಾರರಿಗೆ ಏನು ಬೇಕು? ಹೀಗೆ ಹಲವಾರು ಪ್ರಶ್ನೆಗಳು.

ಹೆಚ್ಚಿನ ಸಂದರ್ಭಗಳಲ್ಲಿ, ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ತಜ್ಞರ ತಂಡವು ಕ್ಷೇತ್ರಕ್ಕೆ ಹೋಗಿ ಡೇಟಾ ಸಂಗ್ರಹಣೆ ಮಾಡಬೇಕಾಗುತ್ತಿತ್ತು, ಇದು ಖರ್ಚು ಹೆಚ್ಚು ಮತ್ತು ಸಮಯ ತೆಗೆದುಕೊಳ್ಳುವ ಪ್ರಕ್ರಿಯೆ. ಆದರೆ, ಸರಳ, ಕಡಿಮೆ ವೆಚ್ಚದ ಮತ್ತು ನಿಖರವಾದ ಮತ್ತೊಂದು ಮಾರ್ಗವಿದೆ: ಸರಿಯಾದ ಡಿಜಿಟಲ್ ಉಪಕರಣಗಳ ಬಳಕೆ.

### ಡಿಜಿಟಲೀಕರಣ: ಒಂದು ಕ್ರಾಂತಿಕಾರಕ ಬದಲಾವಣೆ

ಡಿಜಿಟಲೀಕರಣವೂ ಎಫ್ ಪಿ ಒ ಗಳ ಕೆಲಸದ ವಿಧಾನವನ್ನು ಬದಲಾಯಿಸುತ್ತದೆ. ಇದರಿಂದ ಪ್ರಕ್ರಿಯೆಗಳು ಸುಲಭವಾಗುತ್ತವೆ, ಪಾರದರ್ಶಕತೆ ಹೆಚ್ಚಾಗುತ್ತದೆ ಮತ್ತು ಡೇಟಾವನ್ನು ಆಧಾರವಾಗಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯವಾಗುತ್ತದೆ. ಡಿಜಿಟಲ್ ದಾಖಲಾತಿಗಳು ಮತ್ತು ಉಪಕರಣಗಳು ಸಾಮಗ್ರಿ ಸಂಗ್ರಹಣೆ, ಹಣಕಾಸು ವ್ಯವಹಾರಗಳು ಮತ್ತು ಸದಸ್ಯರ ಭಾಗವಹಿಸುವಿಕೆಯನ್ನು ಸುಧಾರಿಸುತ್ತದೆ. ಇದರಿಂದ ಸುಗಮ ಆಡಳಿತ ಮತ್ತು ವಿಸ್ತರಣೆಗೆ ಸಹಾಯವಾಗುತ್ತದೆ. ಜೊತೆಗೆ, ರೈತರು, ಕೃಷಿ ಉದ್ಯಮಗಳು, ಸರ್ಕಾರದ ಅಧಿಕಾರಿಗಳು ಮತ್ತು ಹಣಕಾಸು ಸಂಸ್ಥೆಗಳ ಜೊತೆ ಉತ್ತಮ ಸಂಪರ್ಕ ಸಾಧಿಸಲು ಡಿಜಿಟಲ್ ವೇದಿಕೆಗಳು ಸಹಕಾರ ನೀಡುತ್ತವೆ.

### ಡೇಟಾ ಸಂಗ್ರಹ ಮತ್ತು ವಿಶ್ಲೇಷಣೆಗೆ farmer.chat partner ಉಪಕರಣ

farmer. chat partner ಉಪಕರಣವು ಸಂಪನ್ಮೂಲ ಸಂಸ್ಥೆಗಳು ಮತ್ತು ಎಫ್ ಪಿ ಒಗಳಿಗೆ ಡೇಟಾವನ್ನು ಸೆರೆಹಿಡಿಯಲು ಮತ್ತು ವ್ಯವಹಾರಗಳ ಪರಿಣಾಮಕಾರಿ ಮುನ್ನಡಿಸಲು ಡೇಟಾವನ್ನು ವಿಶ್ಲೇಷಿಸಲು ಕೆಳಗಿನ ಅಂತರ ಸಂಪರ್ಕ ಸಾಧನಗಳನ್ನು ಹೊಂದಿದೆ:

**ವೆಬ್ ಆಪ್ (ನಾಯಕರಿಗೆ ಒಂದು ಉಪಕರಣ):**

ಇದು ಸಂಪನ್ಮೂಲ ಸಂಸ್ಥೆಗಳು (RI) ಮತ್ತು ಎಫ್ ಪಿ ಒಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ಕಮಾಂಡ್ ಸೆಂಟರ್ ಆಗಿದೆ. RI ಬಳಕೆದಾರರು, ಎಫ್ ಪಿ ಒಗಳು, ಮೊಬೈಲ್ ಆಪ್ ಬಳಕೆದಾರರು, ಹಾಗೂ ದೊಡ್ಡ ಪ್ರಮಾಣದಲ್ಲಿ ಡೇಟಾ ಅಪ್ಲೋಡ್‌ಗಳನ್ನು ನಿರ್ವಹಿಸಬಹುದು. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಮ್ಮ ಎಫ್ ಪಿ ಒಗೆ ಸಂಬಂಧಿಸಿದ ನಿರ್ದಿಷ್ಟ ಮಾಹಿತಿ ನೋಡಲು ಸುಲಭ ಮಾಡಿಕೊಡುತ್ತದೆ ಹಾಗೆ ಇದರ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ.

### ಡಿಜಿಟಲ್ ಗ್ರೀನ್ ಟ್ರಸ್ಟ್ ನ ಪಾತ್ರ

ಡಿಜಿಟಲ್ ಗ್ರೀನ್ ಟ್ರಸ್ಟ್ (DGT) ಭಾರತದಲ್ಲಿನ ಎಫ್ ಪಿ ಒಗಳ ಡಿಜಿಟಲ್ ಬೆಳವಣಿಗೆಗೆ ಸಹಾಯ ಮಾಡುವ ಸಂಸ್ಥೆಯಾಗಿದ್ದು, 200 ಕ್ಕಿಂತ ಹೆಚ್ಚು ಎಫ್ ಪಿ ಒಗಳೊಂದಿಗೆ ಕೆಲಸ ಮಾಡುತ್ತಿದೆ. ಇದರ ಮುಖ್ಯ ಉದ್ದೇಶ ಎಫ್ ಪಿ ಒಗಳ ಡೇಟಾವನ್ನು ಬಳಸಿಕೊಂಡು ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಮಾಡುವುದು, ಹಾಗೂ ಸದಸ್ಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು. DGT ಅಭಿವೃದ್ಧಿಪಡಿಸಿದ ಡಿಜಿಟಲ್ ಸಾಧನಗಳು, ಎಫ್ ಪಿ ಒ ನಾಯಕತ್ವದ ನಿರ್ಧಾರಗಳನ್ನು ಸ್ಪಷ್ಟವಾಗಿ ಮತ್ತು ಸರಿಯಾಗಿ ತೆಗೆದುಕೊಳ್ಳಲು ಸಹಾಯ ಮಾಡುತ್ತವೆ.

**ಮೊಬೈಲ್ ಆಪ್ (ಸಬಲೀಕರಣಕ್ಕಾಗಿ ಕ್ಷೇತ್ರ ಬಲಪಡಿಸುವಿದು):**
ಇದು ಎಫ್ ಪಿ ಒ ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಡೇಟಾ ಸಂಗ್ರಹಕರು ಮತ್ತು ಕ್ಷೇತ್ರ ವಿಸ್ತರಣಾ ಸಿಬ್ಬಂದಿ ಕಚೇರಿ ಸಿಬ್ಬಂದಿಗೆ ಬೇಕಾದ ಮಾಹಿತಿ ನೀಡುತ್ತದೆ. ಈ ಆಪ್ ಮೂಲಕ ಗ್ರಾಮ ಮಟ್ಟದ ಮಾಹಿತಿ ಸಂಗ್ರಹಿಸಲು, ರೈತರ ನೋಂದಣಿ, ಪಾಲುದಾರರ ನೊಂದಣಿ, ಆರ್ಡರ್ ಮತ್ತು ಖರೀದಿ ನಿರ್ವಹಿಸಲು ಸಾಧ್ಯವಾಗುತ್ತದೆ. ಈ ಆಪ್ ಹೊಸ ಉತ್ಪನ್ನಗಳನ್ನು ಸೇರಿಸುವುದು, ಸ್ಟಾಕ್ ನವೀಕರಿಸುವುದು, ರೈತರಿಗೆ ಕ್ಷೇತ್ರ ವಿಸ್ತರಣಾ ಸಿಬ್ಬಂದಿ ನಿಯೋಜಿಸುವುದು ಮುಂತಾದ ನಿರ್ಣಾಯಕ ಕಾರ್ಯಗಳನ್ನು ನಿರ್ವಹಿಸಲು ಖಚಿತಪಡಿಸುತ್ತದೆ. ಇಂಗ್ಲೀಷ್, ಹಿಂದಿ, ಕನ್ನಡ, ಗುಜರಾತಿ, ತೆಲುಗು ಮತ್ತು ಒಡಿಯ ಭಾಷೆಗಳಲ್ಲಿ ಲಭ್ಯವಿದೆ.

**ಡ್ಯಾಶ್ ಬೋರ್ಡ್ ( ಒಂದು ಪಕ್ಷಿ ನೋಟ):**
ಈ ಸಾಧನವು RI ಬಳಕೆದಾರರಿಗೆ ಎಫ್ ಪಿ ಒಗಳ ಸಂಪೂರ್ಣ ಮಾಹಿತಿ ನೀಡುತ್ತದೆ. ಎಕ್ಸೆಲ್ ವರದಿಗಳು ಡೌನ್ಲೋಡ್ ಮಾಡಲು, ಡೇಟಾ ಚಾಲಿತ ನಿರ್ಧಾರ ತೆಗೆದುಕೊಳ್ಳಲು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಮ್ಮ ಸಂಸ್ಥೆಯ ಬಗ್ಗೆ ಕೇಂದ್ರೀಕೃತ ಮಾಹಿತಿ ನೋಡಲು ಲಭ್ಯವಿರುತ್ತದೆ. ಇದು ಇಂಗ್ಲಿಷ್ ಭಾಷೆಯಲ್ಲಿ ಲಭ್ಯವಿದೆ.

ಈ ಡಿಜಿಟಲ್ ಪರಿಕರಗಳು ಈಗಾಗಲೇ ಗಮನಾರ್ಹ ಪರಿಣಾಮವನ್ನು ಪ್ರದರ್ಶಿಸಿದೆ:

- ಎಫ್ ಪಿ ಒ ಮಂಡಳಿಗಳಲ್ಲಿ ಮಹಿಳೆಯರಶೇ.30 ಹೆಚ್ಚು ಪ್ರತಿನಿಧಿತ್ವ.
- ವ್ಯಾಪಾರ ಬಹಿವಾಟಿನಲ್ಲಿ ಶೇ.50 ಹೆಚ್ಚಳ.
- ಸದ್ಯಸರ ತೊಡಗಿಸಿಕೊಳ್ಳುವಿಕೆಯಲ್ಲಿ ಸರಾಸರಿ ಶೇ.30 ಹೆಚ್ಚಳ.
- ಖರೀದಿ ಅಥವಾ ಮಾರಾಟಗಳ ಮೂಲಕ ಸಕ್ರಿಯ ಸದಸ್ಯರಿಗೆ 20% ಆದಾಯ ಅಥವಾ ಉಳಿತಾಯ ಹೆಚ್ಚಳ.

ಇದಲ್ಲದೆ, farmer.chat ನ ನಿಯೋಜನೆಯು ಎಫ್ ಪಿ ಒ ಸೇವೆಗಳೊಂದಿಗೆ ಸದಸ್ಯರ ತೊಡಗಿಸಿಕೊಳ್ಳುವಿಕೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. farmer.chat ಅನ್ನು farmer.chat partner ಅಪ್ಲಿಕೇಶನ್ನೊಂದಿಗೆ ಸಂಯೋಜಿಸುವುದರಿಂದ ರೈತರು ತಮ್ಮೊಂದಿಗೆ ಸಂವಹನ ನಡೆಸುವ ವಿಧಾನದಲ್ಲಿ ಬದಲಾವಣೆ ಉಂಟು ಮಾಡುವ ಸಾಮರ್ಥ್ಯವನ್ನು ಹೊಂದಿದೆ. AI ಸಂಯೋಜನೆಯು ಎಫ್ ಪಿ ಒ ನಾಯಕತ್ವವನ್ನು ಮತ್ತಷ್ಟು ಬಲಪಡಿಸಬಹುದು. eFarm ಮತ್ತು farmer.chat ಅಪ್ಲಿಕೇಶನ್ಗಳ ಮೂಲಕ ಸಂಗ್ರಹಿಸಿದ ಡೇಟಾವನ್ನು ಬಳಸಿಕೊಂಡು, ಎಫ್ ಪಿ ಒ ಗಳಿಗೆ ತಮ್ಮ ಸದಸ್ಯರಿಗೆ ವ್ಯವಹಾರ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳಲು ಮಾರ್ಗದರ್ಶನವನ್ನು ಒದಗಿಸುತ್ತದೆ.

# ಪ್ರಯತ್ನ ಸಣ್ಣದು..ಬದಲಾವಣೆ ದೊಡ್ಡದು...

## ಮೇಘ ಮಂಡಳಿ ಮಹಿಳಾ ಸಹಕಾರಿ, ಸೂರತ್, ಗುಜರಾತ್

ಗುಜರಾತ್‌ನ ಸೂರತ್‌ನಲ್ಲಿರುವ ಮೇಘ ಮಂಡಳಿ ಮಹಿಳಾ ಸಹಕಾರಿಯು ಭತ್ತದ ಬೀಜ ಕಂಪನಿಗಳೊಂದಿಗೆ ಸಂಪರ್ಕ ಸಾಧಿಸಿ ಸಮಂಜಸ ಬೆಲೆಯಲ್ಲಿ ಬೀಜಗಳನ್ನು ಪಡೆದು ಗರಿಷ್ಠ ಲಾಭ ಗಳಿಸಲು ಬಯಸಿತು. 3000 ರೈತರಿಂದ ವಿವಿಧ ತಳಿಗಳ ಮತ್ತು ಪ್ರಮಾಣದ ಬೇಡಿಕೆಗಳನ್ನು ಸಂಗ್ರಹಿಸಲು ಅವರು ಡಿಜಿಟಲ್ ಸಾಧನವನ್ನು ಬಳಸಿದರು. ಇದು FPO ನಾಯಕತ್ವಕ್ಕೆ ಹೆಚ್ಚು ಮಾರಾಟವಾಗುವ ಟಾಪ್ 5 ಕಂಪನಿಗಳನ್ನು ಗುರುತಿಸಲು, ರೈತರ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಹೆಚ್ಚಿನ ಬೇಡಿಕೆಯಿರುವ ಹಳ್ಳಿಗಳನ್ನು ಗುರುತಿಸಲು ಸಹಾಯ ಮಾಡಿತು. ಈ ಡೇಟಾದ ಮುಂಗಡ ದೃಷ್ಟಿಯು ಅವರಿಗೆ ಹಣಕಾಸು, ಲಾಜಿಸ್ಟಿಕ್ಸ್, ತರಬೇತಿಗಳು ಮತ್ತು ಸೂಕ್ತವಾದ ಒಪ್ಪಂದಗಳನ್ನು ಯೋಜಿಸಲು ಸಹಾಯ ಮಾಡಿತು. ಈ ಪ್ರಕ್ರಿಯೆಯು ಮಂಡಳಿಯ ವಹಿವಾಟನ್ನು 3 ಪಟ್ಟು ಹೆಚ್ಚಿಸಲು, ಸದಸ್ಯರ ತೊಡಗಿಸಿಕೊಳ್ಳುವಿಕೆಯನ್ನು 2 ಪಟ್ಟು ಹೆಚ್ಚಿಸಲು ಮತ್ತು ಶೇ.7 ರಿಂದ 8 ಲಾಭಾಂಶವನ್ನು ಗಳಿಸಲು ಸಹಾಯ ಮಾಡಿತು. ಮೇಘ ಮಂಡಳಿ ನಾಯಕತ್ವವು ಎಲ್ಲಾ ಉತ್ಪನ್ನಗಳಿಗೂ ಇದೇ ಪ್ರಕ್ರಿಯೆಯನ್ನು ಅನುಸರಿಸುತ್ತದೆ. ■ ■ ■




## ಜೋಡೆತ್ತು FPCL, ಮಂಡ್ಯ, ಕರ್ನಾಟಕ

ಮಂಡ್ಯ, ಕರ್ನಾಟಕದಲ್ಲಿರುವ ಜೋಡೆತ್ತು FPCL, ಷೇರುದಾರರನ್ನು ಆಕರ್ಷಿಸಲು ಇನ್‌ಪುಟ್ ಪೂರೈಕೆ ಚಟುವಟಿಕೆಯಾಗಿ ರಸಗೊಬ್ಬರಗಳನ್ನು ಮಾರಾಟ ಮಾಡಲು ಪ್ರಾರಂಭಿಸಿತು. ಸಾಮರ್ಥ್ಯವರ್ಧನೆ ಪ್ರಕ್ರಿಯೆಯ ಸಮಯದಲ್ಲಿ, ವ್ಯಾಪಾರ ಯೋಜನೆಗಾಗಿ ಡೇಟಾವನ್ನು ಬಳಸಲು ನಾಯಕರಿಗೆ ತರಬೇತಿ ನೀಡಲಾಯಿತು. FPO ಮತ್ತು ಅದರ ಚಟುವಟಿಕೆಗಳನ್ನು ಡಿಜಿಟಲೀಕರಣಗೊಳಿಸಿದ ನಂತರ, FPO ನಾಯಕತ್ವವು ರೈತರಿಂದ ಸಂಗ್ರಹಿಸಿದ ಡೇಟಾದಿಂದ ತಮ್ಮ ಷೇರುದಾರರು ಮತ್ತು ಷೇರುದಾರರಲ್ಲದವರಿಂದ ಜಾನುವಾರು ಆಹಾರದ ಬೇಡಿಕೆಯನ್ನು ಗುರುತಿಸಲು ಸಾಧ್ಯವಾಯಿತು. FPO ನಾಯಕತ್ವವು ಪಶು ಆಹಾರ ಪೂರೈಕೆದಾರರೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿತು ಮತ್ತು ಜಾನುವಾರು ಆಹಾರದ ಮಾರಾಟವನ್ನು ಹೆಚ್ಚಿಸಿತು ಮತ್ತು 2024-25 ರಲ್ಲಿ, ಆದಾಯದ 50% ಪಶು ಆಹಾರ ಮಾರಾಟದಿಂದ ಬರುತ್ತದೆ. ಜೋಡೆಟ್ಟು CEO ಮತ್ತು ಮಂಡಳಿಯ ಸದಸ್ಯರು ತಮ್ಮ ಪ್ರಗತಿಯನ್ನು ಇಲಾಖೆಗಳಿಗೆ ಪ್ರಸ್ತುತಪಡಿಸಲು ಡ್ಯಾಶ್‌ಬೋರ್ಡ್ ಮತ್ತು farmer.chat partner ಅಪ್ಲಿಕೇಶನ್ ಅನ್ನು ಬಳಸಿದ್ದಾರೆ ಮತ್ತು ಸರ್ಕಾರದಿಂದ ಉತ್ತಮ ಬೆಂಬಲವನ್ನು ಪಡೆದಿದ್ದಾರೆ. ಅವರು farmer.chat partner ನಿಂದ ಡೇಟಾವನ್ನು ವಿಶ್ಲೇಷಿಸುತ್ತಿದ್ದಾರೆ. ಹೆಚ್ಚಿನ ಬೇಡಿಕೆಯ ಉತ್ಪನ್ನಗಳು, ಹೆಚ್ಚಿನ ಖರೀದಿಗಳಿರುವ ಹಳ್ಳಿಗಳು, ಸದಸ್ಯರ ತೊಡಗಿಸಿಕೊಳ್ಳುವಿಕೆಯ ಶೇಕಡಾವಾರು, ರೈತರ ಉತ್ಪಾದನೆ ಮತ್ತು ನಿಷ್ಠಾವಂತ ಗ್ರಾಹಕರ ಮೂಲ ಅರ್ಥಮಾಡಿಕೊಳ್ಳಲು ಅವರು ಇದನ್ನು ಬಳಸುತ್ತಿದ್ದಾರೆ. FPO ತಂಡದ ಮನಸ್ಸಿನಲ್ಲೂ FPO ಬೆಳವಣಿಗೆಗೆ ಈ ವ್ಯವಸ್ಥೆ ಸಹಕಾರಿಯಾಗಿದೆ ಎಂಬ ಭಾವನೆ ಇದೆ.

■ ■ ■

SEHGAL FOUNDATION



# ರೈತ ಉತ್ಪಾದಕರ ಸಂಸ್ಥೆಗಳ ಮೂಲಕ ಕರ್ನಾಟಕದಲ್ಲಿ ಪ್ರಗತಿಗೆ ಶಕ್ತಿ: ಎಸ್ ಎಮ್ ಸೇಘಲ್ ಫೌಂಡೇಶನ್

ನಿರಂತರವಾಗಿ ಆಧುನಿಕತೆಯತ್ತ ಮುಖಮಾಡುತ್ತಿರುವ ಭಾರತೀಯ ಕೃಷಿಯ ಹಂಗಿನ ನಡುವೆ ಹೆಚ್ಚುತ್ತಿರುವ ಪರಿಕರಗಳ ವೆಚ್ಚಗಳು, ಅಸ್ಥಿರವಾದ ಮಾರುಕಟ್ಟೆ ಪ್ರವೇಶ ಮತ್ತು ಅಕಾಲಿಕ ತಂತ್ರಜ್ಞಾನ ಜ್ಞಾನಕ್ಕೆ ಸಣ್ಣ ಮತ್ತು ಅತಿಸಣ್ಣ ರೈತರು ದಾಸರಾಗುತ್ತಿದ್ದಾರೆ. ಹೀಗಿದ್ದರೂ ಸಹ, ರೈತ ಉತ್ಪಾದಕರ ಸಂಸ್ಥೆಗಳ (ಎಫ್‌ಪಿಒ) ಒಗ್ಗಟ್ಟಿನ ಶಕ್ತಿಯ ಮೂಲಕ ಈ ಕಥೆ ಹೊಸ ರೂಪು ಪಡೆಯುತ್ತಿದೆ, ಮತ್ತು ಇನ್ನಷ್ಟು ಯಶಸ್ಸಿನತ್ತ ಸಾಗುತ್ತಿದೆ.

ಎಫ್‌ಪಿಒಗಳು ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದ್ದು, ರೈತರು ತಮ್ಮ ಸಂಪತ್ತುಗಳನ್ನು ಒಟ್ಟುಗೂಡಿಸಿ, ಪರಸ್ಪರ ಜ್ಞಾನ ಹಂಚಿಕೊಳ್ಳುವಂತೆ ಮತ್ತು ವ್ಯಕ್ತಿಗತ ಸಣ್ಣ ರೈತರನ್ನು ಕಡೆಗಣಿಸುವ ಮಾರುಕಟ್ಟೆಯಲ್ಲಿ ಒಂದು ಸಮೂಹವಾಗಿ ನಿಲ್ಲಲು ಸಾಧ್ಯವಾಗುವಂತೆ ಮಾಡಿದೆ. ಟಾಟಾ-ಕಾರ್ನೆಲ್ ಇನ್‌ಸ್ಟಿಟ್ಯೂಟ್ ಪ್ರಕಾರ ಜುಲೈ 2021ರ ವೇಳೆಗೆ ಭಾರತದಲ್ಲಿ 16,000ಕ್ಕೂ ಹೆಚ್ಚು ಎಫ್‌ಪಿಒಗಳು ನೋಂದಾಯಿತವಾಗಿದ್ದರೂ ಸಹ ಈ ಕ್ಷೇತ್ರದ ಪಯಣ ಸುಲಭವಲ್ಲ: ಈ ಸಂಸ್ಥೆಗಳಲ್ಲಿ ಶೇ.20 ಕ್ಕಿಂತ ಹೆಚ್ಚು ಮುಚ್ಚಿ ಹೋಗುವ ಅಪಾಯದಲ್ಲಿವೆ ಮತ್ತು ಹತ್ತು ವರ್ಷಗಳಿಗಿಂತ ಹಳೆಯದಾದ ಎಫ್‌ಪಿಒಗಳಲ್ಲಿ ಅರ್ಧಕ್ಕೂ ಹೆಚ್ಚು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿಲ್ಲ (Ras.org).

## ಗ್ರಾಮೀಣ ಮಹಿಳಾ ರೈತರ ಉದ್ಯಮಶೀಲತೆಗಾಗಿ ಸಂಸ್ಥೆ ಮಟ್ಟದ ಉತ್ತೇಜನ

- ಸೆಘಲ್ ಫೌಂಡೇಶನ್ ಕರ್ನಾಟಕದಲ್ಲಿ 15 ರೈತ ಉತ್ಪಾದಕ ಸಂಸ್ಥೆಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ಎಫ್ ಪಿ ಒ ಆಡಳಿತ, ವ್ಯವಹಾರ ಅಭಿವೃದ್ಧಿ ಮತ್ತು ಮೌಲ್ಯ ಸರಪಳಿ ಆಧಾರಿತ ಮಧ್ಯಸ್ಥಿಕೆಗಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದೆ. ಮಹಿಳಾ ನೇತೃತ್ವದ ಎಫ್‌ಪಿಒಗಳು ಮತ್ತು ರೈತರ ಆಸಕ್ತಿಯ ಗುಂಪುಗಳು (FIGs) ಪ್ರಬಲವಾಗಿ ಹೊರಹೊಮ್ಮಿರುವುದು ವಿಶೇಷವಾಗಿದೆ.

- 306 FIGಗಳ ಮುಖಾಂತರ 7,380 ಕ್ಕೂ ಹೆಚ್ಚು ಮಹಿಳಾ ರೈತರು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದು, 252 ಮಹಿಳೆಯರು ಮೇಕೆ/ಕುರಿ ಸಾಕಣೆ, ಜೇನು ಸಾಕಣೆ ಮತ್ತು ತೋಟಗಾರಿಕೆಯಲ್ಲಿ ಜೀವನೋಪಾಯದ ಅವಕಾಶಗಳನ್ನು ಪಡೆದುಕೊಂಡು ಅನೇಕ ಆದಾಯ ಮಾರ್ಗಗಳನ್ನು ಕಂಡುಕೊಂಡಿವೆ.

- ಮಹಿಳೆಯರು ಈಗ ಬೀಜ ಸಂಸ್ಕರಣೆ, ಎಣ್ಣೆ ತೆಗೆಯುವುದು, ಸೌರ ಒಣಗಿಸುವಿಕೆ, ತರಕಾರಿ ಮತ್ತು ಹಣ್ಣಿನ ಕೃಷಿ, ಬಿಸ್ಕತ್, ಉಪ್ಪಿನಕಾಯಿ ಮತ್ತು ಹರ್ಬಲ್ ಉತ್ಪನ್ನಗಳ ತಯಾರಿಕೆಯಂತಹ ಚಟುವಟಿಕೆಗಳನ್ನು ಸಕ್ರಿಯವಾಗಿ ನಿರ್ವಹಿಸುತ್ತಿದ್ದಾರೆ.

- 12 ಮಹಿಳಾ FIGಗಳು ತಮ್ಮ ಮೌಲ್ಯವರ್ಧಿತ ಉತ್ಪನ್ನಗಳನ್ನು ಎರಡು ಅಮೃತ್ ಮಳಿಗೆಗಳು, ಸ್ಥಳೀಯ ಸಂತೆಗಳು, ಜಾತ್ರೆಗಳು ಮತ್ತು ಎಫ್‌ಪಿಒ ಮಳಿಗೆಗಳ ಮೂಲಕ ಮಾರಾಟ ಮಾಡಿ ಯಶಸ್ಸು ಸಾಧಿಸುತ್ತಿದ್ದು, ತಮ್ಮ ಕ್ರಿಯಾತ್ಮಕತೆ ಮತ್ತು ಉದ್ಯಮ ಮನೋಭಾವನೆಯನ್ನು ಪ್ರದರ್ಶಿಸುತ್ತಿದ್ದಾರೆ.

- ಈ ಯಶಸ್ಸು ಸಾಧ್ಯವಾಗಿದ್ದು, ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ವಿವಿಧ ಸರ್ಕಾರಿ ಯೋಜನೆಗಳ ಜೊತೆ ಉತ್ತಮ ಸಹಕಾರದಿಂದಾಗಿದೆ. ತಾಂತ್ರಿಕ ತರಬೇತಿ, ಕ್ಷೇತ್ರ ಭೇಟಿ ಹಾಗೂ ಸಹಾಯಧನದ ಅನುದಾನಗಳ ಮೂಲಕ ಎಫ್‌ಪಿಒಗಳ ಏಳಿಗೆಗೆ ಬೇಕಾದ ಸಾಮರ್ಥ್ಯ ಮತ್ತು ತಿಳಿವಳಿಕೆಯನ್ನು ನೀಡಿವೆ.

## ಗ್ರಾಮೀಣ ಎಫ್‌ಪಿಒಗಳ ಬಲವರ್ಧನೆಗೆ ಎಸ್. ಎಂ ಸೇಘಲ್ ಮತ್ತು ವಾಲ್‌ಮಾರ್ಟ್ ಜಂಟಿ ಪ್ರಯತ್ನ

ಎಫ್ ಪಿ ಒ ಗಳಲ್ಲಿ ಇರುವ ಅವಕಾಶಗಳು ಮತ್ತು ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು, 13 ರಾಜ್ಯಗಳಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಎನ್ ಜಿ ಒ: ಎಸ್ ಎಮ್ ಸೇಘಲ್ ಫೌಂಡೇಶನ್, ವಾಲ್‌ಮಾರ್ಟ್ ಫೌಂಡೇಶನ್‌ನ ಸಹಕಾರದೊಂದಿಗೆ, ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಮುಂದಾಯಿತು. 2021ರಿಂದ ಪ್ರಾರಂಭವಾದ ಈ ಸಹಭಾಗಿತ್ವವು ಉತ್ತರ ಪ್ರದೇಶದ ಪ್ರಯಾಗರಾಜ್ ಮತ್ತು ಕರ್ನಾಟಕದ ಕೋಲಾರದಲ್ಲಿ 22 ಎಫ್‌ಪಿಒಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಆಧುನಿಕ ತಂತ್ರಜ್ಞಾನಗಳ ಬಳಕೆ ಮೂಲಕ ಕೃಷಿ ಉತ್ಪಾದಕತೆ ಹೆಚ್ಚಿಸುವುದರಿಂದ ಹಿಡಿದು, ಉತ್ತಮ ಕೃಷಿ ಪರಿಕರಗಳನ್ನು ಮತ್ತು ಮಾರುಕಟ್ಟೆಗಾಗಿ ಹಿಂದಿನ ಮತ್ತು ಮುಂದಿನ ಸಂಪರ್ಕಗಳನ್ನು ನಿರ್ಮಿಸುವ ತನಕ, ಶಕ್ತಿಶಾಲಿ ಬೆಂಬಲ ವ್ಯವಸ್ಥೆಯನ್ನು ನಿರ್ಮಿಸಿತು. ಇದರಿಂದ ಜೀವನೋಪಾಯದ ಅವಕಾಶಗಳು ಹೆಚ್ಚಿದವು, ಹಣಕಾಸು ಸ್ಥಿರತೆ ಬೆಳೆಯಿತು ಮತ್ತು ರೈತರು ತಮ್ಮನ್ನು ತಾವು ಕೃಷಿ ಚಟುವಟಿಕೆಗಳ ಸಕ್ರಿಯವಾಗಿ ಪಾಲ್ಗೊಳ್ಳಲು ಆರಂಭಿಸಿದರು.



ವ್ಯವಹಾರ ಕಾರ್ಯವೈಖರಿ ಮತ್ತು ಆರ್ಥಿಕವಾಗಿ ಸಾಧಿಸಿದ ಯಶಸ್ಸು ಈ ಎಫ್ ಪಿ ಒ ಗಳನ್ನು ಮುನ್ನಡೆಸುತ್ತಿದೆ. 7 ಎಫ್‌ಪಿಒಗಳು ಸೇರಿ ರೂ. 2.8 ಕೋಟಿ ಮೌಲ್ಯದ ಮಾವು ವ್ಯಾಪಾರವನ್ನು ಪ್ರಮುಖ ಮಾರುಕಟ್ಟೆ ವ್ಯಾಪಾರಿಗಳು, IQF ಘಟಕಗಳು, ಎಪಿಎಂಸಿ ಮತ್ತು ಸ್ಥಳೀಯ ವ್ಯಾಪಾರಿಗಳ ಜೊತೆ ಯಶಸ್ವಿಯಾಗಿ ನಡೆಸಿದವು. ಇದರ ಪರಿಣಾಮವಾಗಿ ರೈತರಿಗೆ ಉತ್ತಮ ಮಾರುಕಟ್ಟೆ ಪ್ರವೇಶ ಮತ್ತು ಆದಾಯ ಹೆಚ್ಚಳವಾಯಿತು. 15 ಎಫ್‌ಪಿಒಗಳಲ್ಲಿ ಕೃಷಿ ಪರಿಕರಗಳ ವ್ಯವಹಾರಗಳು ರೂ. 11.47 ಕೋಟಿ ಮತ್ತು ಕೃಷಿ ಉತ್ಪನ್ನ ವ್ಯವಹಾರಗಳು ರೂ. 5.30 ಕೋಟಿ ತಲುಪಿವೆ.




ಎಫ್‌ಪಿಒಗಳು ಕೇವಲ ರೈತರ ಗುಂಪುಗಳು ಅಲ್ಲ — ಅವು ಗ್ರಾಮೀಣ ಅಭಿವೃದ್ಧಿಗೆ ಚಾಲನೆ ನೀಡುವ ಶಕ್ತಿಯಾಗಿದೆ. ಮಹಿಳೆಯರು ಇವುಗಳ ನೇತೃತ್ವ ವಹಿಸಿದಾಗ (ಎಫ್‌ಪಿಒ ಸದಸ್ಯರಲ್ಲಿ ಕನಿಷ್ಠ ಅರ್ಧ ಭಾಗ ಮಹಿಳೆಯರು; ಮತ್ತು ಆಡಳಿತ ಮಂಡಳಿಯಲ್ಲಿ 30% ಮಹಿಳಾ ಸದಸ್ಯರು), ಬದಲಾವಣೆ ಕುಟುಂಬಗಳಿಂದ ಸಮಾಜದವರೆಗೆ ಹರಡುತ್ತದೆ. ಈ ಬೆಳವಣಿಗೆ ಪ್ರತಿಯೊಬ್ಬ ರೈತನ ಭವಿಷ್ಯವನ್ನು ಉಜ್ವಲಗೊಳಿಸುತ್ತಿದೆ.

# ಸಹಕಾರದ ಬೀಜ ಬಿತ್ತಿ ಬೆಳೆಯಾಗಿಸಿದ ನಿದರ್ಶನವೇ ಪಿಂಗಾರ FPO



ಪಿಂಗಾರ ತೋಟಗಾರಿಕಾ ರೈತ ಉತ್ಪಾದಕ ಕಂಪನಿಯು ಬಂಟ್ವಾಳ ತೋಟಗಾರಿಕಾ ಇಲಾಖೆಯ ಸಹಕಾರದೊಂದಿಗೆ ವಿಟ್ಲದ ಸುತ್ತಮುತ್ತ ಇರುವ 16 ಗ್ರಾಮಗಳಿಂದ 1000 ರೈತರನ್ನು ನೊಂದಾಯಿಸಿಕೊಂಡು 2016 ಮೇ 23 ರಂದು ನೋಂದಾವಣೆಗೊಂಡಿತು. 15 ಜನ ನಿರ್ದೇಶಕರನ್ನು ಒಳಗೊಂಡ ಈ ಕಂಪನಿಯು ರಾಮಕಿಶೋರ್ ಮಂಚಿ ಇವರ ಅಧ್ಯಕ್ಷತೆಯಲ್ಲಿ ಮುನ್ನಡೆಯುತ್ತಿದೆ. ಕಂಪನಿ ನಿಯಮದ ಪ್ರಕಾರ ಎಲ್ಲಾ ದಾಖಲೆಗಳನ್ನು ದಾಖಿಲಿಸಿ SFAC ಯಿಂದ 10 ಲಕ್ಷ ರೂ ಇಕ್ವಿಟಿಯನ್ನು ಪಡೆದಿರುತ್ತದೆ. ಪಿಂಗಾರ ಕಂಪನಿಯು ತನ್ನ ವ್ಯವಹಾರವನ್ನು ಬಾಡಿಗೆ ಕಟ್ಟಡದಲ್ಲಿ ಕಚೇರಿಯನ್ನು ತೆರೆದು ಬಾಡಿಗೆ ಯಂತ್ರಧಾರೆಯನ್ನು 2017ರಲ್ಲಿ ಪ್ರಾರಂಭಿಸಿತು. ಅದೇ ಕಟ್ಟಡದಲ್ಲಿ ಹೆಚ್ಚುವರಿ ಜಾಗವನ್ನು ಸುಸಜ್ಜಿತ ಹಲಸು ಹಾಗೂ ಬಾಳೆಕಾಯಿ ಮೌಲ್ಯವರ್ಧನ ಘಟಕವನ್ನು 2018ರಲ್ಲಿ ಪ್ರಾರಂಭಿಸಿ, ರೈತರಿಂದ ಹಲಸನ್ನು ಪ್ರತಿ ಕಿಲೊಗೆ 5ರೂ ನಂತೆ ಖರೀದಿಸಿ ಹತ್ತು ಹಲವು ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ತಮ ರೀತಿಯಲ್ಲಿ ತಯಾರಿಸಿ ಮಾರಾಟ ಮಾಡುತ್ತಾ ಬಂದಿದೆ.

## ಪಿಂಗಾರಾದ ಘಟಕ: ಹಲಸಿನಲ್ಲಿ ಸಿಕ್ಕಿದ ಹಳದಿ ಬಂಗಾರ





ಕಳೆದ ವರ್ಷ 12 ಲಕ್ಷದ ಹಲಸನ್ನು ಖರೀದಿಸಿ 25 ಲಕ್ಷದ ಮೌಲ್ಯವರ್ಧಿತ ಹಲಸು ಉತ್ಪನ್ನಗಳನ್ನು ಮಾರಾಟ ಮಾಡಿರುತ್ತದೆ. 2019ರಲ್ಲಿ ಎಸ್.ಎಫ್.ಎ.ಸಿ (SFAC) ಯ ಕ್ರೆಡಿಟ್ ಗ್ಯಾರಂಟಿ ಯೋಜನೆಯ ಆಧಾರದೊಂದಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ 75 ಲಕ್ಷ ರೂಪಾಯಿಗಳ ಸಾಲದ ನೆರವಿನೊಂದಿಗೆ ದಕ್ಷಿಣ ಕನ್ನಡದ ಮುಖ್ಯ ಬೆಳೆಯಾದ ಅಡಿಕೆ ಖರೀದಿ ಮತ್ತು ಮಾರಾಟವನ್ನು ಪ್ರಾರಂಭಿಸಿತು ಅಡಿಕೆಯನ್ನು ರೈತನ ಮನೆ ಬಾಗಿಲಿನಿಂದಲೇ ಖರೀದಿಸಿ ಹಣವನ್ನು ಅವನ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತಾ ಉತ್ತಮ ದರವನ್ನು ರೈತರಿಗೆ ಕೊಡುವುದರಿಂದ ರೈತರ ಪ್ರಶಂಸೆಗೆ ಪಾತ್ರವಾಗಿದೆ. 2025ನೇ ಸಾಲಿನಿಂದ ಉತ್ತರ ಭಾರತದ ಮಾರುಕಟ್ಟೆಗೆ ಅಡಿಕೆಯನ್ನು ನೇರವಾಗಿ ಸರಬರಾಜು ಮಾಡಲು ಪ್ರಾರಂಭಿಸುರುವುದು ಒಂದು ಹೆಗ್ಗಳಿಕೆ.







60-70 ಅಡಿ ಎತ್ತರದ ಅಡಿಕೆ ಮರವನ್ನು ಏರಿ ಅಡಿಕೆ ಗೊನೆಗಳಿಗೆ ಔಷಧಿ ಸಿಂಪಡಣೆ ಹಾಗೂ ಅಡಿಕೆ ಕೊಯ್ಲು ಮಾಡುವುದು ತುಂಬಾ ಶ್ರಮದಾಯಕ ಹಾಗೂ ಅಪಾಯಕಾರಿ ಕೆಲಸ. ಇದಕ್ಕೆ ನುರಿತ ಕೆಲಸಗಾರರ ಅಭಾವವನ್ನು ಮನಗಂಡು 2022ರಲ್ಲಿ ಪಿಂಗಾರವು "ಅಡಿಕೆ ಕೌಶಲ್ಯ ಪಡೆ" ಎಂಬ ತಂಡವನ್ನು ರಚಿಸಿತು. ಇದರಲ್ಲಿ ಕಾರ್ಬನ್ ಫೈಬರ್ ದೋಟಿ ಉಪಯೋಗಿಸಿ ನೆಲದಿಂದಲೇ ಸಿಂಪಡಣೆ ಹಾಗೂ ಕೊಯ್ಲನ್ನು ಮಾಡಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಈ ತಂಡದೊಂದಿಗೆ ರೈತರ ತೋಟಕ್ಕೆ ಕಳುಹಿಸಿ ನಿಗದಿಪಡಿಸಿದ ದಿನದಂದು ಕೆಲಸ ಮುಗಿಸಿ ಕೊಡುತ್ತಿರುವುದರಿಂದ **"ರೈತ ಸ್ನೇಹಿ", "ಆಪತ್ಬಾಂಧವ ಪಿಂಗಾರ"** ಎಂಬ ಬಿರುದುನೊಂದಿಗೆ ಪಿಂಗಾರ ಕಂಪನಿಯನ್ನು ಗುರುತಿಸುವಂತಾಗಿದೆ. ಇದರ ಮುಂದುವರಿದ ಭಾಗವಾಗಿ 2022ರಲ್ಲಿ ತೆಂಗು ಕೊಯ್ಲು ಮಾಡಲು ತಂಡವನ್ನು ರಚಿಸಿ ಕರೆ ಮಾಡಿದ ರೈತರ ತೋಟಕ್ಕೆ ಹೋಗಿ ವ್ಯವಸ್ಥಿತವಾಗಿ ಕೊಯ್ಲು ಮುಗಿಸಿ ಬರುತ್ತಿರುವುದು ತೆಂಗಿನ ತೋಟದವರಿಗೆ ನೆಮ್ಮದಿ ತಂದಿದೆ.

2023 ರಲ್ಲಿ ಪಿಂಗಾರ ತೋಟಗಾರಿಕಾ ರೈತ ಉತ್ಪಾದಕರ ಸಂಸ್ಥೆಯು ವಿಟ್ಲ ಕಸಬಾ ನೆಲ್ಲಿಗುಡ್ಡೆ ಎಂಬಲ್ಲಿ 3-32 ಎಕರೆ ಜಮೀನನ್ನು 2.50 ಕೋಟಿಗೆ ಖರೀದಿಸಿರುವುದು ಒಂದು ಮಹತ್ತರವಾದ ಘಟ್ಟ 2.32 ಎಕರೆ ಕೃಷಿ ಭೂಮಿಯಲ್ಲಿ ಅಡಿಕೆ ತೋಟವಿದ್ದು ಅದರೊಂದಿಗೆ ಒಂದು ಎಕರೆ ವಾಣಿಜ್ಯ ಪರಿವರ್ತಿತ ಜಾಗವು ಇರುವುದು ಪಿಂಗಾರದ ಮುಂದಿನ ಬೆಳವಣಿಗೆಗೆ ಬೆಳವಣಿಗೆಗೆ ಸಾಕಷ್ಟು ಸಹಕಾರಿಯಾಗಲಿದೆ. PMFME ಯೋಜನೆಯ ಅಡಿಯಲ್ಲಿ HDFC ಬ್ಯಾಂಕಿನಿಂದ 75 ಲಕ್ಷ ರೂಪಾಯಿಗಳ ಸಾಲವನ್ನು ಪಡೆದು ಕಂಪನಿಯು ಸುಸಜ್ಜಿತವಾದ ಕಟ್ಟಡವನ್ನು, ಕಚೇರಿ, ಗೋದಾಮು ಹಾಗೂ ವಿವಿಧ ಯಂತ್ರೋಪಕರಣಗಳನ್ನು ಅಳವಡಿಸಿದೆ. ಹಿಂದೆ ಇದ್ದ ಬಾಡಿಗೆ ಕಟ್ಟಡದಿಂದ ಮೇ 1 2025 ರಂದು ಹೊಸ ಜಾಗಕ್ಕೆ ಸ್ಥಳಾಂತರಗೊಂಡಿತು. ಸುಮಾರು 125 ಕಾರ್ಮಿಕರಿಗೆ ಜೀವನಾಧಾರವಾಗಿದ್ದು ಕಳೆದ ಸಾಲಿನಲ್ಲಿ ಆರು ಕೋಟಿ ವ್ಯವಹಾರವನ್ನು ಮಾಡಿದ್ದು ರೈತರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ವೈಜ್ಞಾನಿಕ ಕೃಷಿಗೆ ಪೂರಕವಾಗುವಂತೆ ಮಾಡಲು ಕಂಪನಿಯು ಮಣ್ಣು ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಿದೆ.





ಮಣ್ಣು ಪರೀಕ್ಷಾ ಶಿಫಾರಸಿನಂತೆ ಹಲವು ರೈತರು ಗೊಬ್ಬರವನ್ನು ನೀಡಿ ಹೆಚ್ಚಿನ ಆದಾಯ ಗಳಿಸಲು ಸಹಕಾರಿಯಾಗುವುದೆಂದು ನಂಬಿದ್ದಾರೆ. ರೈತರು ನೆರವಾಗಿ ತರುವ ಸುಲಿಯದ ಅಡಿಕೆಯನ್ನು ಕಂಪನಿಯು ಯಂತ್ರದ ಮೂಲಕ ಸುಲಿಸಿ ಸ್ವಚ್ಛಗೊಳಿಸಿ, ವಿಂಗಡಿಸಿ ರೈತರಿಂದ ಅದನ್ನು ಖರೀದಿಸುವುದು ಅಥವಾ ದೀರ್ಘಕಾಲ ಕೆಡದಂತೆ ಶೇಖರಿಸಿ ಇಡುವುದು. ರೈತನು ತನ್ನ ಇಚ್ಛೆಯಂತೆ ಅದನ್ನು ಕಂಪನಿಗೆ ಮಾರಾಟ ಮಾಡಿದಾಗ ರೈತರ ಖಾತೆಗೆ ಹಣವನ್ನು ವರ್ಗಾಯಿಸುವುದು. ಮುಂದಿನ ಯೋಜನೆಯಾಗಿ ಪಿಂಗಾರ ಕಂಪನಿಯು ತೆಂಗಿನಕಾಯಿ ಖರೀದಿಸಿ ಒಣಗಿಸಿ ಕೊಬ್ಬರಿಯನ್ನಾಗಿ ಮಾಡಿ ಎಣ್ಣೆ ತೆಗೆದು ಮಾರಾಟ ಯೋಜನೆಯನ್ನು ಈ ಸಾಲಿನಲ್ಲಿ ಮಾಡಲು ಉದ್ದೇಶಿಸಿದೆ. ಹಾಗೆಯೇ ಅಡಿಕೆಯನ್ನು ಒಂದು ಕೆ.ಜಿ ಪ್ಯಾಕ್ ನಲ್ಲಿ ನೇರವಾಗಿ ಉತ್ತರ ಭಾರತಕ್ಕೆ ಕಳುಹಿಸುವ ಯೋಜನೆಯು ಇದೆ. ಅಡಿಕೆ ಸಿಪ್ಪೆಯಿಂದ ಎರೆಹುಳು ಗೊಬ್ಬರವನ್ನು ತಯಾರಿಸುವ ಯೋಜನೆಯನ್ನು ರೂಪಿಸಿದೆ. ಈ ಎಲ್ಲಾ ಕೆಲಸ ಕಾರ್ಯಗಳಿಗೆ ತೋಟಗಾರಿಕಾ ಇಲಾಖೆಯೂ ಇವರಿಗೆ ಸಹಕಾರ ಹಾಗೂ ಸಹಾಯ ನೀಡಿರುವುದನ್ನು ಗೌರವದಿಂದ ನೆನೆಸಿಕೊಳ್ಳುತ್ತಾ ಕಂಪನಿಗೆ ಸುವರ್ಣ ನ್ಯೂಸ್ ಹಾಗೂ ಕನ್ನಡಪ್ರಭ ಪ್ರಾಯೋಜಿತ "ರೈತ ರತ್ನ" ಪ್ರಶಸ್ತಿಯು 2021ರಲ್ಲಿ ಬಂದಿರುತ್ತದೆ ಎಂದು ಹೇಳಲು ಹೆಮ್ಮೆ ಪಡುತ್ತೇವೆ.

# ಸಂಘಟಿತ ಪ್ರಯತ್ನದ ಫಲ:

## ಗೋಪಾಲಕ ರೈತ ಉತ್ಪಾದಕ ಸಂಸ್ಥೆಯ ಯಶಸ್ಸಿನ ಗಾಥೆ





'ಸಾರಾಯಿಗಿದ್ದ ಬೆಲೆ ರೈತ ಬೆಳೆದ ಬೆಳೆಗಿಲ್ಲ'

11.10.2024



ಗೋಪಾಲಕ ರೈತ ಉತ್ಪಾದಕ ಕಂಪನಿಯು ಬಿಜಾಪುರ ಜಿಲ್ಲೆಯ ನಿಡಗುಂದಿ ಹೋಬಳಿಯ ಗೊಳಸಂಗಿ ಗ್ರಾಮದಲ್ಲಿ 12.10.2021ರಲ್ಲಿ ಸ್ಥಾಪನೆಯಾಯಿತು. ಬಿಜಾಪುರ ಜಿಲ್ಲೆ ಐತಿಹಾಸಿಕವಾಗಿ ರಾಜ್ಯದ ಶ್ರೀಮಂತ ಜಿಲ್ಲೆಗಳಲ್ಲಿ ಒಂದಾಗಿದೆ ಇಲ್ಲಿ ಕಂಡು ಬರುವ ಪುರಾವೆಗಳು ಶಿಲಾಯುಗದಿಂದಲೂ ಇದು ಜನ ವಸತಿ ಸ್ಥಳವಾಗಿತ್ತು ಎಂದು ಬಹಿರಂಗ ಪಡಿಸುತ್ತದೆ. ಜಿಲ್ಲೆಯು ಅರೆ-ಶುಷ್ಕ ಹವಮಾನವನ್ನು ಹೊಂದಿದೆ. ಜಿಲ್ಲೆಯಲ್ಲಿ ಎರಡು ರೀತಿಯ ಮಣ್ಣು ಇದೆ. ಮೊದಲನೆಯದು ಆಳವಾದ ಕಪ್ಪು ಮಣ್ಣು (ಯರೇ ಭೂಮಿ), ಇದು ಜೋಳ, ಗೋಧಿ, ದ್ವಿದಳ ಧಾನ್ಯಗಳು, ಸೂರ್ಯಕಾಂತಿ, ಮುಂತಾದ ಬೆಳೆಗಳಿಗೆ ಒಳ್ಳೆಯದು. ಇದು ಹೆಚ್ಚಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಎರಡನೆಯದು ಕೆಂಪು ಮಣ್ಣು (ಮಸಾರಿ/ಮಡ್ಡಿ ಭೂಮಿ) ಇದು ಸಾಮಾನ್ಯವಾಗಿ ಕಳಪೆಯಾಗಿದ್ದು, ನೀರಾವರಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಒಳ್ಳೆಯದು.



ರೈತರ ಜೀವನಮಟ್ಟ ಸುಧಾರಿಸುವ ದೃಷ್ಟಿಯಿಂದ 10,000 ರೈತ ಉತ್ಪಾದಕ ಕಂಪನಿಗಳ ಸ್ಥಾಪನೆ ಮತ್ತು ಪ್ರಚಾರ ಯೋಜನೆಯಡಿ ಗೋಪಾಲಕ ರೈತ ಉತ್ಪಾದಕ ಕಂಪನಿಯು ಸ್ಥಾಪಿತವಾಗಿದೆ ಈ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿ ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರು ಕಾರ್ಯನಿರ್ವಹಿಸುತ್ತಿದ್ದು, ಸಂಪನ್ಮೂಲ ಸಂಸ್ಥೆಯಾಗಿ ಸಹರಾ ಸಂಸ್ಥೆ ದಾವಣಗೆರೆ ಕಾರ್ಯನಿರ್ವಹಿಸುತ್ತಿದೆ. ಈ ಕಂಪನಿಯಲ್ಲಿ 750 ರೈತ ಸದ್ಯಸರನ್ನು ಷೇರು ಸದಸ್ಯರನ್ನು ಒಳಗೊಂಡಿರುತ್ತದೆ. ಇದುವರೆಗೂ ಕಂಪನಿಯು ಒಟ್ಟು ರೂ.10207871.00 ವಹಿವಾಟು ನಡೆಸಿರುತ್ತದೆ. ಕಂಪನಿಯ ಸದಸ್ಯರಿಗೆ ಮತ್ತು ರೈತರಿಗೆ ಬೇಕಾಗುವ ಪರಿಕರಗಳಾದ ತಾಡಪಾಲುಗಳು, ಔಷಧಿ ಸಿಂಪಡಣೆ ಯಂತ್ರ, ಉತ್ತಮ ಬಿತ್ತನೆ ಬೀಜಗಳು, ರಸಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಉತ್ತಮ ಬೆಲೆಗೆ ನೀಡುತ್ತಾ ಬಂದಿರುತ್ತದೆ. ಇದರಿಂದ ರೈತರ ಸಮಯ ಮತ್ತು ಖರ್ಚನ್ನು ಕಡಿಮೆ ಮಾಡಿದಂತಾಗಿದೆ.

ಕಂಪನಿಯು ಇಲ್ಲಿಯ ರೈತರು ಬೆಳೆದಂತಹ ಬೆಳೆಗಳಾದ ತೊಗರಿ ಮತ್ತು ಕಡಲೆಗಳನ್ನು ಖರೀದಿಸಬೇಕೆಂದು ತೀರ್ಮಾನಿಸಿ, ಅವುಗಳಿಗೆ ಉತ್ತಮ ಬೆಲೆ ಮತ್ತು ಮಾರುಕಟ್ಟೆ ನೀಡುವ ಸಲುವಾಗಿ ಕಂಪನಿಯು ತಮ್ಮದೇ "ಸಂಸ್ಕರಣ ಘಟಕ" (ದಾಲ್ ಮಿಲ್)ವನ್ನು ಪ್ರಾರಂಭಿಸಲಾಗಿದೆ. ಹಾಗೂ "ಆಹಾರ ಸಂಸ್ಕರಣಾ ಘಟಕ" (ಅರಿಶಿನ ಪುಡಿ, ಖಾರದ ಪುಡಿ, ಕಡಲೆ ಹಿಟ್ಟು, ರೊಟ್ಟಿ ತಯಾರಿಕೆ ಮತ್ತು ಎಣ್ಣೆ ಗಾಣ) ಗಳನ್ನು ಪ್ರಾರಂಭಿಸಲಾಗಿದೆ. ಕಂಪನಿಯು ತನ್ನದೇ ಆದ ಬ್ರಾಂಡ್ ಮತ್ತು ಪ್ಯಾಕಿಂಗ್ ಮಾಡಿಸಿ ಮಾರುಕಟ್ಟೆ ಮಾಡಲಾಗುತ್ತಿದೆ.

ಕಂಪನಿಯು ಇಲಾಖೆಯಡಿ ನಿರ್ವಹಿಸಿದ ರಫ್ತುದಾರರ ಸಭೆ ಮತ್ತು ಮೇಳಗಳಲ್ಲಿ ಭಾಗವಹಿಸಿ ಮಾರುಕಟ್ಟೆಯನ್ನು ಇನ್ನೂ ಬಲವರ್ಧನಗೊಳಿಸಿಕೊಳ್ಳುವಲ್ಲಿ ಇದು ಸಹಕಾರಿಯಾಗಿದೆ.













# ಸ್ಥಿರತೆ, ಸಹಕಾರ, ಸೇವೆಗಳು: ಸುಳ್ಯ ರೈತ ಉತ್ಪಾದಕರ ಸಂಸ್ಥೆಯ ಗುರಿ














ಸುಳ್ಯ ರೈತ ಉತ್ಪಾದಕ ಕಂಪನಿ ಲಿಮಿಟೆಡ್ (FPC) ತನ್ನ ಪ್ರದೇಶದ ಕೃಷಿ ಸಮುದಾಯವನ್ನು ಸಂಘಟಿಸಿ, ಸ್ಥಿರತೆ ಹಾಗೂ ಸಮೃದ್ಧಿಯತ್ತ ಕರೆದೊಯ್ಯುವ ದಿಸೆಯಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಅರೇಗುಂಟಿ, ಕೋಕೊ, ಜೇನುತುಪ್ಪ, ಮಸಾಲೆ ಗಿಡಗಳು ಮತ್ತು ತೆಂಗು ಬೆಳೆಗಳನ್ನು ಬೆಳೆಸುವ ಸ್ಥಳೀಯ ರೈತರಿಗೆ ತಾಂತ್ರಿಕ, ಆರ್ಥಿಕ ಮತ್ತು ಮಾರುಕಟ್ಟೆ ಬೆಂಬಲ ನೀಡುವ ಮೂಲಕ, ಕಂಪನಿ ರೈತರ ಉತ್ಪಾದನಾ ಸಾಮರ್ಥ್ಯ ಮತ್ತು ಆದಾಯವನ್ನು ಹೆಚ್ಚಿಸಲು ದೃಢ ನಿಲುವಿನಲ್ಲಿ ಕೆಲಸ ಮಾಡುತ್ತಿದೆ. ಈ ಉದ್ದೇಶ ಸಾಧಿಸಲು, ಕಂಪನಿ ರೈತರಿಗೆ ಅಗತ್ಯವಾದ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಹಾಗೂ ನವೀನ ಕೃಷಿ ಸಾಧನಗಳನ್ನು ಒದಗಿಸುತ್ತಿದೆ. ವಿಶೇಷವಾಗಿ, ಕಂಪನಿ ಕಾರ್ಬನ್ ಫೈಬರ್ ದೋಟಿ ಎಂಬ ನವೀನ ಕೃಷಿ ಸಾಧನವನ್ನು ಬಾಡಿಗೆ ಆಧಾರದ ಮೇಲೆ ರೈತರ ಉಪಯೋಗಕ್ಕೆ ಕೊಡುತ್ತಿದೆ. ಇದು ಬಿತ್ತನೆ, ಕೊಯ್ಲು ಮತ್ತು ಒಕ್ಕಣೆ ಕಾರ್ಯಗಳನ್ನು ವೇಗವಾಗಿ, ಕಡಿಮೆ ಕಾರ್ಮಿಕರ ಸಹಾಯದಿಂದ ಮುಗಿಸಲು ಸಾಧ್ಯವಾಗುವಂತೆ ಮಾಡುತ್ತದೆ.

ಸುಳ್ಯವು ತನ್ನ ವೈವಿಧ್ಯಮಯ ಕೃಷಿ ಉತ್ಪನ್ನಗಳಿಗಾಗಿ ಹೆಸರುವಾಸಿಯಾಗಿದೆ: ಏಲಕ್ಕಿ, ಲವಂಗ, ಹರಳು, ಜೊತೆಗೆ ಕೋಕೊ, ತೆಂಗು, ಶುದ್ಧ ಜೇನುತುಪ್ಪ, ಇತ್ಯಾದಿ. ರೈತರಿಗೆ ನ್ಯಾಯಸಮ್ಮತ ಬೆಲೆ ದೊರೆಯಲೆಂದು, ರೈತ ಉತ್ಪಾದಕರ ಸಂಸ್ಥೆಯು ಅವರಿಂದ ನೇರವಾಗಿ ಈ ಉತ್ಪನ್ನಗಳನ್ನು ಖರೀದಿಸಿ, ಮಧ್ಯವರ್ತಿಗಳ ಹಸ್ತಕ್ಷೇಪವನ್ನು ಕಡಿಮೆ ಮಾಡಿ ರೈತರ ಆದಾಯವನ್ನು ಹೆಚ್ಚಿಸುತ್ತಿದೆ. ಕಂಪನಿಯು ತನ್ನದೇ ಆದ 'ಪೂಮಳೆ' ಎಂಬ ಖಾಸಗಿ ಬ್ರಾಂಡ್ ಅಡಿಯಲ್ಲಿ ಈ ಎಲ್ಲಾ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುತ್ತಿದೆ. ಜೇನುತುಪ್ಪ, ಮಸಾಲೆ ಕಿಟ್‌ಗಳು ಮತ್ತು ತೆಂಗಿನ ಎಣ್ಣೆಯು ಈ ಬ್ರಾಂಡ್‌ನಡಿಯಲ್ಲಿ ಲಭ್ಯವಿರುವ ಪ್ರಮುಖ ಉತ್ಪನ್ನಗಳಾಗಿವೆ. ಈ ಉತ್ಪನ್ನಗಳ ತಯಾರಿಗಾಗಿ ಅಗತ್ಯವಿರುವ ಪ್ರಮುಖ ಕಚ್ಚಾ ವಸ್ತುಗಳನ್ನು ಸ್ಥಳೀಯ ರೈತರಿಂದ ನೇರವಾಗಿ ಸಂಗ್ರಹಿಸಲಾಗುತ್ತದೆ. ಕಂಪನಿಯು ಈ ವಸ್ತುಗಳನ್ನು ತಾನೇ ಸಂಸ್ಕರಿಸಿ, ಪ್ಯಾಕ್ ಮಾಡಿ, ಗುಣಮಟ್ಟದ ನಿಯಮಾನುಸಾರ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತದೆ. ಈ ವ್ಯವಸ್ಥೆ ಸ್ಥಳೀಯ ಕೃಷಿಕರಿಗೆ ನಿಗದಿತ ಮಾರುಕಟ್ಟೆ ಹಾಗೂ ಹೆಚ್ಚು ಆದಾಯದ ಅವಕಾಶ ಒದಗಿಸುತ್ತಿದ್ದು, ಗ್ರಾಮೀಣ ಆಧಾರಿತ ಕೃಷಿ ಆರ್ಥಿಕತೆಯ ಬಲವರ್ಧನೆಯಲ್ಲೂ ಪಾತ್ರವಹಿಸುತ್ತಿದೆ.

## ಎಫ್. ಪಿ. ಸಿ ಯಶಸ್ಸಿನ ಮೂಲ ಸ್ಥಿರ ಕೃಷಿ ಪದ್ಧತಿಗಳತ್ತ ಇರುವ ನಿಷ್ಠೆ

FPC ಸಂಸ್ಥೆಯ ಯಶಸ್ಸಿನ ಮೂಲಕಾರಣ ಅದರ ಸ್ಥಿರ ಕೃಷಿ ಪದ್ಧತಿಗಳತ್ತ ಇರುವ ನಿಷ್ಠೆಯಾಗಿದೆ. ಸಂಸ್ಥೆಯು ರೈತರಿಗೆ ವಿಶೇಷ ತರಬೇತಿ ಮತ್ತು ಸಂಪನ್ಮೂಲಗಳ ಮೂಲಕ ಆಧುನಿಕ ಕೃಷಿ ತಂತ್ರಗಳನ್ನು ಪರಿಚಯಿಸಿ, ಬೆಳೆಯುವ ಸಾಮರ್ಥ್ಯವನ್ನು ಹೆಚ್ಚಿಸಿದೆ ಮತ್ತು ಪರಿಸರ ಸಂರಕ್ಷಣೆಯತ್ತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದೆ.

ಈ ಸ್ಥಿರತೆಗೆ ನೀಡಿರುವ ಪ್ರಮುಖ್ಯತೆಯಿಂದ, ಉತ್ಪನ್ನಗಳ ಗುಣಮಟ್ಟವನ್ನು ಗಣನೀಯವಾಗಿ ಉತ್ತಮಗೊಳಿಸಿರುವುದು ಮಾತ್ರವಲ್ಲ, ಸಂಸ್ಥೆಗೆ ಸ್ಥಳೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಮತ್ತು ವಿಶ್ವಾಸವನ್ನೂ ತಂದುಕೊಟ್ಟಿದೆ. ಈ ಮೂಲಕ ಸಂಸ್ಥೆ ಜವಾಬ್ದಾರಿಯುತ ಕೃಷಿ ಕ್ಷೇತ್ರದಲ್ಲಿ ಮುಂಚೂಣಿಯ ನಾಯಕರಾಗಿ ತನ್ನ ಸ್ಥಾನವನ್ನು ಸುದೃಢಗೊಳಿಸಿದೆ.

ಉತ್ತಮ ಗುಣಮಟ್ಟದ ಅಡಿಕೆ ಮತ್ತು ಮೆಣಸು ಗಿಡಗಳನ್ನು ಸದಸ್ಯರಿಗೆ ಒದಗಿಸುವ ಉದ್ದೇಶದಿಂದ ನರ್ಸರಿಗಳು ನಿರ್ವಹಿಸಲಾಗುತ್ತಿದೆ.

ಕೃಷಿ ಚಟುವಟಿಕೆಗಳನ್ನು ಸುಗಮಗೊಳಿಸಲು, ಟ್ರ್ಯಾಕ್ಟರ್‌ಗಳು, ಶ್ರೆಡ್ಡರ್‌ಗಳು ಮತ್ತು ಕೊಯ್ಲು ಯಂತ್ರಗಳು ಸೇರಿದಂತೆ ಹಲವು ಅಗತ್ಯ ಕೃಷಿ ಉಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ನೀಡಲಾಗುತ್ತಿದೆ

2023 ರಲ್ಲಿ, ಸೇವೆಗಳನ್ನು ವಿಸ್ತರಿಸುವ ಭಾಗವಾಗಿ, ಮುಖ್ಯ ಕಚೇರಿಯಿಂದ ಹದಿನೈದು ಕಿಲೋಮೀಟರ್ ದೂರದ ಬೆಳ್ಳಾರೆ ಎಂಬ ಗ್ರಾಮದಲ್ಲಿ ಹೊಸ ಶಾಖೆ ಪ್ರಾರಂಭಿಸಲಾಗಿದೆ. ಈ ಶಾಖೆ ಉತ್ತಮ ಗುಣಮಟ್ಟದ ಕೃಷಿ ಸರಕುಗಳ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಸದಸ್ಯರಿಗೆ ಪ್ಲಾಸ್ಟಿಕ್ ಸಾಮಾನುಗಳು, ರಸಗೊಬ್ಬರ, ಜೈವಿಕ ಗೊಬ್ಬರ, ರಾಸಾಯನಿಕಗಳು, ಕೀಟನಾಶಕಗಳು ಮುಂತಾದ ಉತ್ಪನ್ನಗಳು ಸದಸ್ಯರಿಗೆ ಸುಲಭವಾಗಿ ಲಭಿಸುವಂತೆ ಮಾಡಲಾಗಿದೆ.

ಪೂಮಳೆ ಜೇನುತುಪ್ಪ ಎಂಬ ಇವರ ಬಹುಜನಪ್ರಿಯ ಉತ್ಪನ್ನವು ಈಗ ಅಂತರ್ಜಾಲ ಮಾರಾಟ ವೇದಿಕೆಗಳಾದ ಅಮೆಜಾನ್ ಮತ್ತು ಭಾರತೀಯ ಡಿಜಿಟಲ್ ವಾಣಿಜ್ಯ ಜಾಲದ (ONDC) ಮುಖಾಂತರ ಮಾರಾಟ ಮಾಡಲಾಗುತ್ತಿದೆ. ಇದರಿಂದ ಉತ್ಪನ್ನಕ್ಕೆ ಹೆಚ್ಚಿನ ಮಾರುಕಟ್ಟೆ ವ್ಯಾಪ್ತಿ ದೊರಕಿದ್ದು, ಹೊಸ ಗ್ರಾಹಕರಿಗೆ ತಲುಪುವ ಅವಕಾಶ ಒದಗಿಸಲಾಗಿದೆ.

















## ಮುಖ್ಯಾಂಶಗಳು

**ಆರ್ಥಿಕ ಬೆಳವಣಿಗೆ (2023–2024)**

**ಒಟ್ಟು ಆಮದು:** ₹1,06,73,877

**ಶುದ್ಧ ಲಾಭ:** ₹7,49,827

ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡುವುದು ಮತ್ತು ಸದಸ್ಯರಿಗೆ ಮಾರುಕಟ್ಟೆ ಪ್ರವೇಶವನ್ನು ವಿಸ್ತರಿಸುವಲ್ಲಿ ಕಂಪನಿಯ ನಿಷ್ಠೆ ಪರಿಣಾಮಕಾರಿ ಆರ್ಥಿಕ ಬೆಳವಣಿಗೆಗೆ ಸಾಕ್ಷಿ.

**ರೈತರಿಗೆ ಸಂಪರ್ಕ ಮತ್ತು ಬೆಂಬಲ:**

ಒಟ್ಟು 842 ಸದಸ್ಯರ ಆದಾಯ ಸಾಮರ್ಥ್ಯ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ಉತ್ತಮ ಗುಣಮಟ್ಟದ ಕೃಷಿ ಒಳಪೂರೈಕೆಗಳು, ಮೌಲ್ಯವರ್ಧಿತ ಸಂಸ್ಕರಣಾ ಸೇವೆಗಳು, ಮತ್ತು ಮಾರುಕಟ್ಟೆ ಸಂಪರ್ಕಗಳ ಮೂಲಕ ನೇರ ಬೆಂಬಲ ನೀಡಲಾಗಿದೆ.

**ಆದಾಯ ಮತ್ತು ಉತ್ಪಾದಕತೆ ಮೇಲಿನ ಪ್ರಭಾವ:**

**1. ಆದಾಯದಲ್ಲಿ ಹೆಚ್ಚಳ:** ರೈತರಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮಾರಾಟ ಚಾನೆಲ್‌ಗಳು ಲಭ್ಯವಾದುದು, ಜೊತೆಗೆ ತೆಂಗಿನ ಎಣ್ಣೆ ಮತ್ತು ಪೂಮಳೆ ಜೇನುತುಪ್ಪ ಮುಂತಾದ ಮೌಲ್ಯವರ್ಧಿತ ಉತ್ಪನ್ನ ಮಾರಾಟದಿಂದ ಆದಾಯದಲ್ಲಿ ಗಣನೀಯ ಹೆಚ್ಚಳವಾಯಿತು. ಬೆಳ್ಳಾರೆಯ ಶಾಖೆಯಲ್ಲಿ ಹೋಲ್‌ಸೇಲ್ ದರದಲ್ಲಿ ದಿನನಿತ್ಯದ ಅಗತ್ಯವಸ್ತುಗಳು ಲಭ್ಯವಿರುವುದು, ಮನೆ ಖರ್ಚುಗಳಲ್ಲಿ ಉಳಿತಾಯಕ್ಕೂ ಸಹಾಯಮಾಡಿತು

**2. ಉತ್ಪಾದಕತೆ ಹೆಚ್ಚಳ:** ಉತ್ತಮ ಗುಣಮಟ್ಟದ ಬೀಜಗಳು, ಜೈವ ಗೊಬ್ಬರ, ಮತ್ತು ಉಪಕರಣ ಬಾಡಿಗೆ ಸೇವೆ (ಟ್ರಾಕ್ಟರ್, ಶ್ರೆಡ್ಡರ್) ಲಭ್ಯವಾದ ಪರಿಣಾಮ ಉಳಿಮೆಯ ವೆಚ್ಚ ಮತ್ತು ಉತ್ಪನ್ನದ ಗುಣಮಟ್ಟ ಎರಡೂ ಉತ್ತಮಗೊಂಡು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ದೊರೆಯಿತು.

**3. ವೆಚ್ಚದ ಪರಿಣಾಮಕಾರಿ ನಿರ್ವಹಣೆ:** FPC ಸಂಸ್ಥೆಯು ಅಧಿಕ ಸಂಖ್ಯೆಯಲ್ಲಿ ಪರಿಕರಗಳನ್ನು ಖರೀದಿಸಿ , ಅಂಗಡಿಗಳ ಮುಖಾಂತರ ವಿತರಣೆ ಮಾಡುವ ವಿಧಾನವು ಸದಸ್ಯರಿಗೆ ಕಡಿಮೆ ದರದಲ್ಲಿ ಕೃಷಿ ಪರಿಕರಗಳನ್ನು ನೀಡಿದೆ. ಇದರಿಂದ ಸಿಕ್ಕ ಉಳಿತಾಯವನ್ನು ರೈತರು ತಮ್ಮ ಕೃಷಿ ಚಟುವಟಿಕೆಗಳಲ್ಲಿ ಮತ್ತೆ ಬಂಡವಾಳವಾಗಿ ಬಳಸಲು ಸಾಧ್ಯವಾಯಿತು.

**ಮಾನ್ಯತೆ ಹಾಗೂ ಬ್ರ್ಯಾಂಡಿನ ಮಹತ್ವ**

**1. ಮಾಹಿತಿ ಪ್ರಸಾರ:** FPC ಯ ಕ್ರಿಯಾಶೀಲತೆಗಳು ವಿವಿಧ ಸ್ಥಳೀಯ ಹಾಗೂ ರಾಜ್ಯಮಟ್ಟದ ಪತ್ರಿಕೆಗಳಲ್ಲಿ ವಿಶ್ಲೇಷಣೆ ಮತ್ತು ಪ್ರಕಟಣೆಯ ಮೂಲಕ ಪರಿಚಿತಗೊಂಡಿವೆ.

**2. ಶಿಕ್ಷಣ ಮತ್ತು ಅರಿವು:** FPC ಸಂಸ್ಥೆಯು 2 ಕಾರ್ಬನ್ ಫೈಬರ್ ದೋಟಿ ತರಬೇತಿಗಳು ಹಾಗೂ ರೈತರಿಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದೆ.

**3. ಪ್ರಯೋಗಾತ್ಮಕ ಅನುಭವ:** ಮಸಾಲೆ ಮಂಡಳಿ ಸಹಯೋಗದಲ್ಲಿ, ಸಂಸ್ಥೆಯು ರೈತರಿಗೆ ಮಸಾಲೆ ಉತ್ಪಾದನೆ ಮತ್ತು ಮೌಲ್ಯವರ್ಧನೆ ಕುರಿತ ತರಬೇತಿ ಹಾಗೂ ಪ್ರಯೋಗಾತ್ಮಕ ಕೃಷಿ ಕ್ಷೇತ್ರ ಭೇಟಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

**4. ಪ್ರಾದೇಶಿಕ ಮಟ್ಟದಲ್ಲಿ ಪರಿಚಯ:** ನಿಟ್ಟೆ ಎಜುಕೇಶನ್ ಟ್ರಸ್ಟ್‌ನ ಸಹಯೋಗದಿಂದ, FPC ತನ್ನ ಯಶೋಗಾಥೆಯನ್ನು ಬೆಂಗಳೂರು ನಗರದಲ್ಲಿ ಆಯೋಜಿಸಲಾದ ಪ್ರಾದೇಶಿಕ ಸಮ್ಮೇಳನದಲ್ಲಿ (FPO ಮತ್ತು CBBO ಗಳು ಪಾಲ್ಗೊಂಡ ಸಮ್ಮೇಳನ) ಹಂಚಿಕೊಂಡಿತು. ಇದರ ಮೂಲಕ, ಸಂಸ್ಥೆಯ ಪ್ರಗತಿಯನ್ನು ವೇದಿಕೆಯ ಮೇಲೆ ಪ್ರಸ್ತುತಪಡಿಸಿ ಅಧಿಕಾರಿಗಳ ಗಮನ ಸೆಳೆಯಿತು

# ದಟ್ಟ ಅರಣ್ಯದ ನಡುವೆ ಬೆಳೆಯುತ್ತಿರುವ ರೈತರ ಆಶಾಕಿರಣ: ಕಾಳಿ ಎಫ್‌ಪಿಒ



ಕಾಳಿ ರೈತ ಉತ್ಪಾದಕ ಕಂಪನಿಯು ಜೊಯಿಡಾ ತಾಲೂಕಿನ ಕುಂಬಾರವಾಡ ಗ್ರಾಮದಲ್ಲಿ 19-07-2021 ರಲ್ಲಿ ಸ್ಥಾಪನೆಯಾಗಿದೆ. ಜೊಯಿಡಾ ತಾಲೂಕು ರಾಜ್ಯದ ಹಿಂದುಳಿದ ತಾಲೂಕಿನಲ್ಲಿ ಒಂದಾಗಿದ್ದು, ಇಲ್ಲಿನ 90% ಪ್ರದೇಶ ಅರಣ್ಯ ವ್ಯಾಪ್ತಿಯಲ್ಲಿದೆ. ಈ ತಾಲೂಕು ಹುಲಿ ಸಂರಕ್ಷಿತ ಅರಣ್ಯ, ಪರಿಸರ ಪ್ರವಾಸೋದ್ಯಮಕ್ಕಾಗಿ ಪ್ರಸಿದ್ಧವಾಗಿದೆ.

ರೈತರ ಜೀವನಮಟ್ಟ ಸುಧಾರಿಸುವ ದೃಷ್ಟಿಯಿಂದ 10,000 ರೈತ ಉತ್ಪಾದಕ ಕಂಪನಿಗಳ ಸ್ಥಾಪನೆ & ಪ್ರಚಾರ ಯೋಜನೆಯಡಿ ಕಾಳಿ ರೈತ ಉತ್ಪಾದಕ ಕಂಪನಿಯು ಸ್ಥಾಪಿತವಾಗಿದೆ.

ಈ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿ ಬೆಂಗಳೂರಿನ ಜಲಾನಯನ ಅಭಿವೃದ್ಧಿ ಇಲಾಖೆ ಕಾರ್ಯನಿರ್ವಹಿಸುತ್ತಿದ್ದು, ಸಂಪನ್ಮೂಲ ಸಂಸ್ಥೆಯಾಗಿ ಸ್ಕೊಡ್‌ವೆಸ್ ಸಂಸ್ಥೆ ಶಿರಸಿ ಕಾರ್ಯನಿರ್ವಹಿಸುತ್ತಿದೆ. ಈ ಕಂಪನಿಯು 1000 ರೈತ ಸದಸ್ಯರನ್ನು ಒಳಗೊಂಡಿದ್ದು, ಇದುವರೆಗೆ ನಡೆಸಿದ ಒಟ್ಟು ವ್ಯವಹಾರ ವಹಿವಾಟು ರೂ. 91,34,016. ತನ್ನ ಕಾರ್ಯವೈಖರಿಯನ್ನು 14 ಗ್ರಾಮಗಳಲ್ಲಿ ನಡೆಸುತ್ತಿದೆ. ಸುತ್ತಲು ದಟ್ಟ ಅರಣ್ಯ ಆವರಿಸಿದ್ದು, ಯಾವುದೇ ರೀತಿಯ ಆಧುನಿಕ ಸೌಲಭ್ಯಗಳು ದೊರಕದೇ ರೈತರು ಕೃಷಿ ಪದ್ಧತಿಯಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿರಲಿಲ್ಲ, ಇದನ್ನು ಅರಿತ ಕಾಳಿ ರೈತ ಉತ್ಪಾದಕ ಕಂಪನಿಯು ರೈತರಿಗೆ ಉಪಯೋಗವಾಗುವಂತಹ ಹಲವಾರು ಆಧುನಿಕ ಯಂತ್ರಗಳ ಸೇವೆಯನ್ನು ಸಲ್ಲಿಸುತ್ತಿದೆ.






ಇದಲ್ಲದೇ ರೈತರಿಗೆ ಉಪಯೋಗವಾಗುವಂತಹ ಸಾವಯವ ಗೊಬ್ಬರ, ತರಕಾರಿ ಬೀಜಗಳು, ಶೇಡ್ ನೆಟ್, ತಾಡಪತ್ರೆ ಹಾಗೂ ಇನ್ನಿತರ ಪರಿಕರಗಳನ್ನು ಕಡಿಮೆ ದರದಲ್ಲಿ ರೈತರಿಗೆ ಒದಗಿಸುತ್ತಿದೆ, ಇದರಿಂದ ರೈತರಿಗೆ ಕಡಿಮೆ ವ್ಯಾಪ್ತಿಯಲ್ಲಿ ಪರಿಕರ ದೊರಕುವಂತೆಯಾಗಿದೆ. ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಕಾಡು ಉತ್ಪನ್ನಗಳ ಖರೀದಿ & ಅವುಗಳ ಮೌಲ್ಯವರ್ಧನೆಯನ್ನು ಕಾಳಿ ಬ್ರ್ಯಾಂಡಿನ ಮೂಲಕ ಮಾರಾಟ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಕಂಪನಿಯು ರೈತರಿಗೆ ಅನುಕೂಲವಾಗುವಂತೆ ಗೋದಾಮು ನಿರ್ಮಾಣ ಹಾಗೂ ವಿವಿಧ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಯೋಜನೆ ನಡೆಸಿದೆ.

# ರೈತ ಉತ್ಪಾದಕರ ಸಂಸ್ಥೆಗಳು ಅನುಸರಿಸಬೇಕಾದ ಕಾನೂನು ಅನುಸರಣೆಗಳು#

| ದಿನಾಂಕ | ಜುಲೈ-25 | ದಿನಾಂಕ | ಆಗಸ್ಟ್-25 | ದಿನಾಂಕ | ಸೆಪ್ಟೆಂಬರ್-25 |
|---|---|---|---|---|---|
| 7 ನೇ | • 2025ರ ಜೂನ್ ತಿಂಗಳ ತಡೆದ ತೆರಿಗೆ (TDS/TCS) ಠೇವಣಿ<br>• 2025ರ ಜೂನ್ ತಿಂಗಳ ಸಮೀಕರಣ ಲೆವಿ (Equalization Levy) ಠೇವಣಿ | 7 ನೇ | • 2025ರ ಜುಲೈ ತಿಂಗಳ ತಡೆದ ತೆರಿಗೆ (TDS/TCS) ಠೇವಣಿ<br>• 2025ರ ಜುಲೈ ತಿಂಗಳ ಸಮೀಕರಣ ಲೆವಿ (Equalization Levy) ಠೇವಣಿ | 7 ನೇ | • 2025ರ ಆಗಸ್ಟ್ ತಿಂಗಳ ತಡೆದ ತೆರಿಗೆ (TDS/TCS) ಠೇವಣಿ<br>• 2025ರ ಆಗಸ್ಟ್ ತಿಂಗಳ ಸಮೀಕರಣ ಲೆವಿ (Equalization Levy) ಠೇವಣಿ |
| 11 ನೇ | 2025ರ ಜೂನ್ ತಿಂಗಳ ಮಾಸಿಕ GSTR-1 (ಬಾಹ್ಯ ಪೂರೈಕೆ ರಿಟರ್ನ್) ಸಲ್ಲಿಕೆ | 11 ನೇ | 2025ರ ಜುಲೈ ತಿಂಗಳ ಮಾಸಿಕ GSTR-1 (ಬಾಹ್ಯ ಪೂರೈಕೆ ರಿಟರ್ನ್) ಸಲ್ಲಿಕೆ. | 11 ನೇ | 2025ರ ಆಗಸ್ಟ್ ತಿಂಗಳ ಮಾಸಿಕ GSTR-1 (ಬಾಹ್ಯ ಪೂರೈಕೆ ರಿಟರ್ನ್) ಸಲ್ಲಿಕೆ |
| 13 ನೇ | • 2025ರ ಜೂನ್ ತಿಂಗಳ ಮಾಸಿಕ GSTR-6 (ಇನ್‌ಪುಟ್ ಸರ್ವೀಸ್ ಡಿಸ್ಟ್ರಿಬ್ಯೂಟರ್ ರಿಟರ್ನ್) ಸಲ್ಲಿಕೆ<br>• 2025ರ ಏಪ್ರಿಲ್–ಜೂನ್ ಅವಧಿಗೆ ತ್ರೈಮಾಸಿಕ GSTR-1 (ಬಾಹ್ಯ ಪೂರೈಕೆ ರಿಟರ್ನ್) ಸಲ್ಲಿಕೆ | 13 ನೇ | • 2025ರ ಜುಲೈ ತಿಂಗಳ ಮಾಸಿಕ GSTR-6 (ಇನ್‌ಪುಟ್ ಸರ್ವೀಸ್ ಡಿಸ್ಟ್ರಿಬ್ಯೂಟರ್ ರಿಟರ್ನ್) ಸಲ್ಲಿಕೆ<br>• QRMP ತೆರಿಗೆದಾರರಿಗಾಗಿ 2025ರ ಜುಲೈ ತಿಂಗಳ ಮಾಸಿಕ IFF (ಇನ್ವಾಯ್ಸ್ ಸಲ್ಲಿಕೆ ಸೌಲಭ್ಯ) ಸಲ್ಲಿಕೆ | 13 ನೇ | • 2025ರ ಆಗಸ್ಟ್ ತಿಂಗಳ ಮಾಸಿಕ GSTR-6 (ಇನ್‌ಪುಟ್ ಸರ್ವೀಸ್ ಡಿಸ್ಟ್ರಿಬ್ಯೂಟರ್ ರಿಟರ್ನ್) ಸಲ್ಲಿಕೆ<br>• QRMP ತೆರಿಗೆದಾರರಿಗಾಗಿ 2025ರ ಆಗಸ್ಟ್ ತಿಂಗಳ ಮಾಸಿಕ IFF (ಇನ್ವಾಯ್ಸ್ ಸಲ್ಲಿಕೆ ಸೌಲಭ್ಯ) ಸಲ್ಲಿಕೆ |
| 15 ನೇ | • 2025ರ ಜೂನ್ ತಿಂಗಳ ಪಿಎಫ್ (PF) ಮತ್ತು ಇಎಸ್‌ಐ (ESI) ಪಂಗಣದ ಠೇವಣಿ<br>• 2025ರ ಏಪ್ರಿಲ್–ಜೂನ್ ಅವಧಿಗೆ ಸಂಗ್ರಹಿತ TCS (ತೆರಿಗೆ ಸಂಗ್ರಹ) ವಿವರಗಳ ತ್ರೈಮಾಸಿಕ ಹೇಳಿಕೆ ಸಲ್ಲಿಕೆ<br>• ಒಟ್ಟು ಅಂದಾಜಿತ ತೆರಿಗೆ ಪಾವತಿಯಲ್ಲಿ 15% ಮುಂಗಡ<br>• ಹಿಂದಿನ ತಿಂಗಳಿಗೆ ಸಂಬಂಧಿಸಿದ ಉದ್ಯೋಗಿಗಳ ವೃತ್ತಿ ತೆರಿಗೆ | 15 ನೇ | • 2025ರ ಜುಲೈ ತಿಂಗಳ ಪಿಎಫ್ (PF) ಮತ್ತು ಇಎಸ್‌ಐ (ESI) ಪಂಗಣದ ಠೇವಣಿ<br>• 2025ರ ಏಪ್ರಿಲ್–ಜೂನ್ ಅವಧಿಗೆ ವೇತನವ್ಯತಿರಿಕ್ತ TDS ಪ್ರಮಾಣಪತ್ರದ ನೀಡಿಕೆ<br>• ಹಿಂದಿನ ತಿಂಗಳ ಉದ್ಯೋಗಿಗಳ ವೃತ್ತಿ ತೆರಿಗೆ ರಿಟರ್ನ್ | 15 ನೇ | • 2025ರ ಆಗಸ್ಟ್ ತಿಂಗಳ ಪಿಎಫ್ (PF) ಮತ್ತು ಇಎಸ್‌ಐ (ESI) ಪಂಗಣದ ಠೇವಣಿ<br>• ಹಣಕಾಸು ವರ್ಷ 2025–26 ರಿಗಾಗಿ 45% ಮುಂಗಡ ತೆರಿಗೆಯ (Advance Tax) ಠೇವಣಿ<br>• ಹಿಂದಿನ ತಿಂಗಳ ಉದ್ಯೋಗಿಗಳ ವೃತ್ತಿ ತೆರಿಗೆ ರಿಟರ್ನ್ |
| 20 ನೇ | 2025ರ ಜೂನ್ ತಿಂಗಳ GSTR-3B (ಸಂಗ್ರಹಾತ್ಮಕ ರಿಟರ್ನ್) ಸಲ್ಲಿಕೆ – ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ ವ್ಯವಹಾರ ₹5 ಕೋಟಿ ಕ್ಕಿಂತ ಹೆಚ್ಚಿನವಿರುವ ತೆರಿಗೆದಾರರಿಗಾಗಿ. | 20 ನೇ | 2025ರ ಜುಲೈ ತಿಂಗಳ GSTR-3B (ಸಂಗ್ರಹಾತ್ಮಕ ರಿಟರ್ನ್) ಸಲ್ಲಿಕೆ – ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ ವ್ಯವಹಾರ ₹5 ಕೋಟಿ ಕ್ಕಿಂತ ಹೆಚ್ಚಿನವಿರುವ ತೆರಿಗೆದಾರರಿಗಾಗಿ. | 20 ನೇ | 2025ರ ಆಗಸ್ಟ್ ತಿಂಗಳ GSTR-3B (ಸಂಗ್ರಹಾತ್ಮಕ ರಿಟರ್ನ್) ಸಲ್ಲಿಕೆ – ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ ವ್ಯವಹಾರ ₹5 ಕೋಟಿ ಕ್ಕಿಂತ ಹೆಚ್ಚಿನವಿರುವ ತೆರಿಗೆದಾರರಿಗಾಗಿ |
| 22 ನೇ | 2025ರ ಏಪ್ರಿಲ್–ಜೂನ್ ಅವಧಿಗೆ GSTR-3B (ಸಂಗ್ರಹಾತ್ಮಕ ರಿಟರ್ನ್) ಸಲ್ಲಿಕೆ – ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ ವ್ಯವಹಾರ ₹5 ಕೋಟಿ ಅಥವಾ ಅದಕ್ಕಿಂತ ಕಡಿಮೆ ಇರುವ ಹಾಗೂ ನಿಗದಿತ 14 ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ನೋಂದಾಯಿತ ತೆರಿಗೆದಾರರಿಗಾಗಿ. | 25 ನೇ | 2025ರ ಜುಲೈ ತಿಂಗಳಿಗೆ ಸಾಕಷ್ಟು ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ (ITC) ಲಭ್ಯವಿಲ್ಲದಿದ್ದಲ್ಲಿ, ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ ವ್ಯವಹಾರ ₹5 ಕೋಟಿ ಅಥವಾ ಅದಕ್ಕಿಂತ ಕಡಿಮೆಯಿರುವ ತೆರಿಗೆದಾರರಿಂದ GST ಪಾವತಿಗಾಗಿ PMT-06 ಚಲಾನ್ ಸಲ್ಲಿಕೆ. | 25 ನೇ | 2025ರ ಆಗಸ್ಟ್ ತಿಂಗಳಿಗೆ ಸಾಕಷ್ಟು ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ (ITC) ಲಭ್ಯವಿಲ್ಲದಿದ್ದಲ್ಲಿ, ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ ವ್ಯವಹಾರ ₹5 ಕೋಟಿ ಅಥವಾ ಅದಕ್ಕಿಂತ ಕಡಿಮೆಯಿರುವ ತೆರಿಗೆದಾರರಿಂದ GST ಪಾವತಿಗಾಗಿ PMT-06 ಚಲಾನ್ ಸಲ್ಲಿಕೆ |
| 24 ನೇ | 2025ರ ಏಪ್ರಿಲ್–ಜೂನ್ ಅವಧಿಗೆ GSTR-3B (ಸಂಗ್ರಹಾತ್ಮಕ ರಿಟರ್ನ್) ಸಲ್ಲಿಕೆ – ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ ವ್ಯವಹಾರ ₹5 ಕೋಟಿ ಅಥವಾ ಅದಕ್ಕಿಂತ ಕಡಿಮೆ ಇರುವ ಹಾಗೂ ನಿಗದಿತ 22 ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ನೋಂದಾಯಿತ ತೆರಿಗೆದಾರರಿಗಾಗಿ. | | | 30 ನೇ | • ನಿರ್ದೇಶಕರ KYC ವಿವರಗಳನ್ನು Web KYC ಫಾರ್ಮ್‌ನಲ್ಲಿ ಸಲ್ಲಿಕೆ<br>• ಹಣಕಾಸು ವರ್ಷ 2024–25ರ ಕಡ್ಡಾಯ ಲೆಕ್ಕಪರಿಶೋಧನೆ (Statutory Audit)<br>• ಹಣಕಾಸು ವರ್ಷ 2024–25 ರಲ್ಲಿ ನಿರ್ದೇಶಕರ ಗುರುತು ಸಂಖ್ಯೆ (DIN) ಪಡೆದ ಎಲ್ಲ ನಿರ್ದೇಶಕರ KYC ವಿವರಗಳನ್ನು Form DIR-3 KYC ನಲ್ಲಿ ಸಲ್ಲಿಕೆ |
| 30 ನೇ | 2025ರ ಏಪ್ರಿಲ್–ಜೂನ್ ಅವಧಿಗೆ TCS ಪ್ರಮಾಣಪತ್ರದ ನೀಡಿಕೆ | | | | |
| 31 ನೇ | • 2025ರ ಏಪ್ರಿಲ್–ಜೂನ್ ಅವಧಿಗೆ ತಡೆದ ತೆರಿಗೆ (TDS) ಠೇವಣಿ ವಿವರಗಳ ತ್ರೈಮಾಸಿಕ ಹೇಳಿಕೆ ಸಲ್ಲಿಕೆ<br>• ಹಣಕಾಸು ವರ್ಷ 2024–25 ರಿಗಾಗಿ ವಿದೇಶಸ್ಥರು ಸೇರಿದಂತೆ ವ್ಯಕ್ತಿಗಳು ಮತ್ತು ತೆರಿಗೆ ಲೆಕ್ಕ ಪರಿಶೀಲನೆಗೆ ಒಳಪಡುವ ಅಗತ್ಯವಿಲ್ಲದ ನಾನ್-ಕಾರ್ಪೊರೇಟ್ ಸಂಸ್ಥೆಗಳ ಆದಾಯ ತೆರಿಗೆ ರಿಟರ್ನ್ (ITR) ಸಲ್ಲಿಕೆ | | | | |

ಕಂಪನಿಗಳ ಕಾಯ್ದೆ, 2013ರ ಪ್ರಕಾರ ವಾರ್ಷಿಕ ಸರ್ವಸದಸ್ಯರ ಸಭೆ (AGM) ಸಂಬಂಧಿತ ಅನುಸರಣೆಗಳು:

1. ವಾರ್ಷಿಕ ಸರ್ವಸದಸ್ಯರ ಸಭೆ (AGM) ಆಯೋಜಿಸಲು ಕೊನೆ ದಿನಾಂಕ – 30 ಸೆಪ್ಟೆಂಬರ್ 2025
2. Form AOC-4 ಅನ್ನು ಕಂಪನಿಗಳ ನಿಬಂಧಕ ಅಧಿಕಾರಿಗೆ (Registrar of Companies) ಸಲ್ಲಿಕೆ (ಹಣಕಾಸು ಹಂಚಿಕೆ ಹಾಗೂ ಲಾಭ-ನಷ್ಟ ಪತ್ರಿಕೆ ಸೇರಿದ ವಾರ್ಷಿಕ ವರದಿ): ವಾರ್ಷಿಕ ಸರ್ವಸದಸ್ಯರ ಸಭೆ (AGM) ನಡೆದ ದಿನಾಂಕದಿಂದ 30 ದಿನಗಳೊಳಗಾಗಿ. Form MGT-7 ಅನ್ನು ಕಂಪನಿಗಳ ನಿಬಂಧಕ ಅಧಿಕಾರಿಗೆ (Registrar of Companies) ಸಲ್ಲಿಕೆ (ವಾರ್ಷಿಕ ವರದಿ): AGM ನಡೆದ ದಿನಾಂಕದಿಂದ 60 ದಿನಗಳೊಳಗಾಗಿ

# ಮೇಲ್ಕಂಡ ಮಾಹಿತಿಯು ಆದಾಯ ತೆರಿಗೆ ಕಾಯ್ದೆ, 1961, ಜಿಎಸ್‌ಟಿ ಕಾಯ್ದೆ, ಕಂಪನಿಗಳ ಕಾಯ್ದೆ, ಭವಿಷ್ಯನಿಧಿ ಕಾಯ್ದೆ, ಇಎಸ್‌ಐ ಕಾಯ್ದೆ ಮತ್ತು ಇತರ ಪ್ರಮುಖ ನಿಯಮಗಳಡಿಯಲ್ಲಿ ಅನುಸರಿಸಬೇಕಾದ ಕೆಲ ಮುಖ್ಯ ನಿಯಮಾನುಸರಣೆಗಳನ್ನು ಒಳಗೊಂಡಿದೆ. ಈ ಮಾಹಿತಿಯು ವಿಶ್ವಾಸಾರ್ಹವೆಂದು ನಂಬಲಾದ ಪ್ರಕಟಿತ ಮೂಲಗಳಿಂದ ಸಂಗ್ರಹಿಸಲ್ಪಟ್ಟಿದೆ. ಇದರ ಉದ್ದೇಶ ಕೇವಲ ಸಾಮಾನ್ಯ ಮಾರ್ಗದರ್ಶನವಷ್ಟೆ ಮತ್ತು ಯಾವುದೇ ರೀತಿಯ ವೃತ್ತಿಪರ, ತಾಂತ್ರಿಕ ಅಥವಾ ಕಾನೂನು ಸಲಹೆಗೆ ಪರ್ಯಾಯವಾಗುವದಿಲ್ಲ.

## ಸಾಮಾಜಿಕ ಮಾಧ್ಯಮಗಳಲ್ಲಿ
# ನಮ್ಮನ್ನು ಅನುಸರಿಸಿ

www.coefpo.org

COE FPO @coefpo

coefpo@gmail.com

COE FPO @coefpo

Centre of Excellence for Farmer Producer Organizations (CoE-FPO)

## ಸಂಪಾದಕೀಯ ಸಮಿತಿ


**ಪ್ರಕಾಶಕರು:**

**ಡಾ. ಸೀತಾರಾಮು ಜಿ. ಕೆ.**
**ನಿರ್ದೇಶಕರು**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ
ಮೊಬೈಲ್: 94820 47765

**ಸಂಪಾದಕರು:**

**ಡಾ. ಸದಾನಂದ ಜಿ. ಕೆ.**
**ಉಪ ನಿರ್ದೇಶಕರು**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ
ಮೊಬೈಲ್: 94811 81749

**ಸಹ ಸಂಪಾದಕರು:**

**ಡಾ. ಶಶಿಭೂಷಣ ಎ. ಘಟ್ಟಟ್ಟಿ**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ವೈ.ಆರ್. ಜಯಣ್ಣ**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಡಾ. ಪ್ರಸನ್ನ ಹೆಚ್. ಎಸ್.**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ರಿತೇಶ್ ಜಿ. ಕೆ.**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಪ್ರತಿಮ. ಸಿ. ಎಂ**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಶೀತಲ್. ಬಿ. ಆರ್**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ



## ಕೃತಜ್ಞತೆಗಳು

**ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವ ಇಲಾಖೆಗಳು ಮತ್ತು ಸಂಸ್ಥೆಗಳು**



## ವಿಳಾಸ:

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ,
ತೋ. ವಿ. ವಿ. ಆವರಣ, ಜಿ. ಕೆ. ವಿ. ಕೆ. ರಸ್ತೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು- 560097
ದೂರವಾಣಿ: +91-80-29721577
ಮಿಂಚಂಚೆ: coefpo@gmail.com; ವೆಬ್ ಸೈಟ್: www.coefpo.org